# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 243 Issue: 243 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 02.04.2025 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2




Good Opportunity for Branding
1,20,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038




ದೇವಾಲಯ ದರ್ಶನ

ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ
ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ
-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


## ಆನಂದ ಬಾಣ

ಶಿಕ್ಷಣದಿಂದ ಮಾತ್ರ ಶ್ರೇಷ್ಠ ದಿನಗಳನ್ನು ಸೃಷ್ಟಿಸಲು ಸಾಧ್ಯ....



## ಪುಸ್ತಕಗಳನ್ನು ಪ್ರಕಟಿಸಿದರೆ ಸಾಲದು ಕನ್ನಡದ ಜ್ಞಾನ ಅನಾವರಣಗೊಳ್ಳಲಿ

### ಶಾಸಕ ಎಚ್.ಆರ್. ಗವಿಯಪ್ಪ ಹೇಳಿಕೆ | 60 ಪುಸ್ತಕ ಲೋಕಾರ್ಪಣೆ



> ಕನ್ನಡ ವಿಶ್ವವಿದ್ಯಾಲಯ ನಮ್ಮ ಭಾಗದಲ್ಲಿರುವುದೇ ನಮ್ಮ ಸೌಭಾಗ್ಯ. ಅಗತ್ಯ ಸಹಕಾರವನ್ನು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಕೊಡಿಸುವೆ. ವಿಜಯನಗರ ಜಿಲ್ಲೆಯಲ್ಲಿಂದು ಪ್ರವಾಸೋದ್ಯಮ ಆದಾಯದ ಮೂಲವಾಗಿದೆ. ವಿಶ್ವವಿದ್ಯಾಲಯದಲ್ಲಿ ಹೋಟೆಲ್ ಮ್ಯಾನೇಜ್‌ಮೆಂಟ್ ಕೋರ್ಸ್ ಆರಂಭಿಸುವುದರ ಮೂಲಕ ದೇಶಿಯ ಆಹಾರ, ಕಲೆ, ಸಂಸ್ಕೃತಿ ಯನ್ನು ಪರಿಚಯಿಸುವ ಕೆಲಸವಾಗಬೇಕು.
>
> ■ ಎಚ್.ಆರ್.ಗವಿಯಪ್ಪ, ಶಾಸಕ

■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯ ತನ್ನ 33ನೇ ನುಡಿಹಬ್ಬದ ಪ್ರಯುಕ್ತ ಕಲೆ, ಸಾಹಿತ್ಯ, ಇತಿಹಾಸ, ವಿಜ್ಞಾನ ಮತ್ತು ಆರೋಗ್ಯ ಸೇರಿದಂತೆ ವಿವಿಧ ಬಗೆಯ 60 ಪುಸ್ತಕಗಳನ್ನು ಪ್ರಕಟಿಸಿರುವುದು ಉತ್ತಮವಾದ ಕಾರ್ಯ. ಪುಸ್ತಕಗಳನ್ನು ಪ್ರಕಟಿಸಿದರಷ್ಟೇ ಸಾಲದು ಅವುಗಳನ್ನು ಬೆಳಕಿಗೆ ತರುವ ಕೆಲಸವು ಆಗಬೇಕು. ವಿಶ್ವವಿದ್ಯಾಲಯವು ಇದುವರೆಗೂ ಪ್ರಕಟಿಸಿರುವ ಪುಸ್ತಕಗಳನ್ನು ಡಿಜಿಟಲೈಜೇಶನ್ ಮಾಡುವ ಕಾರ್ಯಕ್ಕೆ ಮುಂದಾದರೆ ಕನ್ನಡದ ಜ್ಞಾನವನ್ನು ಅನಾವರಣಗೊಳಿಸಲು ಸಾಧ್ಯವಾಗುತ್ತದೆ ಎಂದು ಶಾಸಕ ಎಚ್.ಆರ್. ಗವಿಯಪ್ಪ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಮಂಟಪ ಸಭಾಂಗಣದಲ್ಲಿ 33ನೇ ನುಡಿಹಬ್ಬ ಪ್ರಯುಕ್ತ ಪ್ರಸಾರಾಂಗ ಹಮ್ಮಿಕೊಂಡಿದ್ದ ಪುಸ್ತಕ ಬಿಡುಗಡೆ ಸಮಾರಂಭವನ್ನು ಉದ್ಘಾಟಿಸಿ, ಪುಸ್ತಕಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಕನ್ನಡ ವಿಶ್ವವಿದ್ಯಾಲಯ ಒಂದು ಐಕಾನಿಕ್ ವಿಶ್ವವಿದ್ಯಾಲಯ. ಇಂತಹ ವಿಶಿಷ್ಟವಾದ ವಿಶ್ವವಿದ್ಯಾಲಯ ನಮ್ಮಲ್ಲಿರುವುದು ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಹೆಮ್ಮೆಯ ವಿಷಯ. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದರ ಮೂಲಕ ಹಂಪಿಯ ಪ್ರವಾಸಿಗರಿಗೆ ರೆಸ್ಟೋರೆಂಟ್‌ಗಳನ್ನು ತೆರೆಯುವ ಕೆಲಸವಾಗುತ್ತಿದೆ. ಹಂಪಿಯ ಸ್ಮಾರಕಗಳು ಮತ್ತು ಪರಿಸರವನ್ನು ನೋಡಲು ಬರುವ ಪ್ರವಾಸಿಗರು ಕನ್ನಡ ವಿಶ್ವವಿದ್ಯಾಲಯಕ್ಕೆ ಆಗಮಿಸಿ ಇಲ್ಲಿನ ಪುಸ್ತಕಗಳನ್ನು ನೋಡಬೇಕು, ಓದಬೇಕು ಎಂದರು.

ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಡಿ.ವಿ.ಪರಮಶಿವಮೂರ್ತಿ ಅಧ್ಯಕ್ಷತೆವಹಿಸಿ ಮಾತನಾಡಿ, ಭಾರತದ ಬೇರಾವ ವಿಶ್ವವಿದ್ಯಾಲಯದಲ್ಲೂ ಇಲ್ಲದ ಸಂಶೋಧನಾ ಕಳಕಳಿ ಕನ್ನಡ ವಿಶ್ವವಿದ್ಯಾಲಯದಲ್ಲಿದೆ. ಇಲ್ಲಿನ ಪ್ರತಿಯೊಬ್ಬರು, ಗಿಡಮರಗಳು ಸಹ ಸಂಶೋಧನೆಯನ್ನೇ ಧ್ಯಾನಿಸುತ್ತವೆ. ಕನ್ನಡ ವಿಶ್ವವಿದ್ಯಾಲಯ ಬೇರೆ ಹಳೆಯ ವಿಶ್ವವಿದ್ಯಾಲ ಯಗಳಿಗೆ ಸರಿಸಾಟಿಯಾಗಿ 1650ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. ಇಲ್ಲಿನ ಪುಸ್ತಕಗಳ ಗುಣಮಟ್ಟ ಉತ್ಕೃಷ್ಟವಾದುದು. ವಿಶ್ವವಿದ್ಯಾಲಯದ ಪ್ರಸಾರಾಂಗವು ಲಾಭವನ್ನು ನಗಣ್ಯವಾಗಿ ಪರಿಗಣಿಸಿ ಇಲ್ಲಿ ನಿರ್ಲಕ್ಷಕ್ಕೆ ಒಳಗಾದ ಅನೇಕ ವಿಷಯಗಳನ್ನು ತಳಮಟ್ಟದಿಂದ ಸಂಶೋಧನೆಯನ್ನು ಮಾಡಿ ರೂಪಿಸಿದ ಉತ್ತಮ ಗುಣಮಟ್ಟದ ಪುಸ್ತಕಗಳನ್ನು ಪ್ರಕಟಿಸಿದೆ. ಸರ್ಕಾರದ ಅನುದಾನದ ಕೊರತೆಯ ನಡುವೆ ಸಂಶೋಧನೆ ನಿರಂತರವಾಗಿ ನಡೆಯುತ್ತಿದೆ. ಉತ್ತಮವಾದ ಪುಸ್ತಕಗಳು, ಚಿಂತಕರ ಆಲೋಚನೆಗಳು ಪುಸ್ತಕದ ರೂಪದಲ್ಲಿ ಓದುಗರ ಕೈ ಸೇರಬೇಕು >> 03

## ಪ್ರವಾಸೋದ್ಯಮ ಇಲಾಖೆ : ದೇಖೋ ಆಪ್ನ ದೇಶ್ ಫೋಟೋ ಕಾಂಟೆಸ್ಟ್

■ **ಹಂಪಿ ಟೈಮ್ಸ್ ಬಳ್ಳಾರಿ**

ಪ್ರವಾಸೋದ್ಯಮ ಇಲಾಖೆ ವತಿಯಿಂದ 'ಡಿಸ್ಕವರ್ ದಿ ಬ್ಯೂಟಿ ಆಫ್ ಇಂಡಿಯಾ' ಶೀರ್ಷಿಕೆಯಡಿ 'ದೇಖೋ ಅಪ್ನ ದೇಶ್ ಫೋಟೋ ಕಾಂಟೆಸ್ಟ್-2025' ಸ್ಪರ್ಧೆ ಏರ್ಪಡಿಸಲಾಗಿದ್ದು, ಬಳ್ಳಾರಿ ಜಿಲ್ಲೆಯ ಪ್ರಮುಖ ಧಾರ್ಮಿಕ, ಸಾಂಸ್ಕೃತಿಕ, ಪಾರಂಪರಿಕ, ಕರಕುಶಲ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿತಾಣಗಳ ಅತ್ಯಾಕರ್ಷಕ ಛಾಯಾಚಿತ್ರಗಳನ್ನು ಸೆರೆಹಿಡಿದು ಪ್ರವಾಸಿ ತಾಣಗಳ ಕಿರು ವಿವರಣೆಯೊಂದಿಗೆ Dekhoapnadeshphotos@gmail.com ಇ-ಮೇಲ್ ಗೆ ನೇರವಾಗಿ ಕಳುಹಿಸಿಕೊಡಬಹುದಾಗಿದೆ.

ಪ್ರವಾಸೋದ್ಯಮವನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಹಾಗೂ ಎಲ್ಲಾ ವರ್ಗಗಳ ಧಾರ್ಮಿಕ, ಸಾಂಸ್ಕೃತಿಕ, ಪಾರಂಪರಿಕ, ಕರಕುಶಲ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿತಾಣಗಳಲ್ಲಿ ಪ್ರವಾಸಿಗರ ದೃಷ್ಟಿಕೋನದಲ್ಲಿ ಪ್ರಮುಖ ಪ್ರವಾಸಿತಾಣಗಳನ್ನು ಗುರುತಿಸಿ, ವಿಶ್ವದರ್ಜೆಯಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮದಿಂದ 'ಡಿಸ್ಕವರ್ ದಿ ಬ್ಯೂಟಿ ಆಫ್ ಇಂಡಿಯಾ' ಶೀರ್ಷಿಕೆಯಡಿ 'ದೇಖೋ ಅಪ್ನ ದೇಶ್ ಫೋಟೋ ಕಾಂಟೆಸ್ಟ್-2025' ಸ್ಪರ್ಧೆ ಏರ್ಪಡಿಸಲಾಗಿದ್ದು, ಈ ಸಂಬಂಧ ರಾಜ್ಯದ ಎಲ್ಲಾ ಜಿಲ್ಲೆಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಛಾಯಾಚಿತ್ರಗಳನ್ನು ಸೆರೆಹಿಡಿದು ಇ-ಮೇಲ್ ಗೆ ನೇರವಾಗಿ ಕಳುಹಿಸಲು ಏ.07 ರ ವರೆಗೆ ಅವಕಾಶ ಕಲ್ಪಿಸಲಾಗಿದೆ.

**ವರ್ಗ:** ಸ್ಮಾರಕ, ವನ್ಯಜೀವಿ, ಜಿಐ ಟ್ಯಾಗ್ ಕರಕುಶಲ ವಸ್ತುಗಳು ಮತ್ತು ಕೈಮಗ್ಗಗಳು, ಭೂದೃಶ್ಯ(ಲ್ಯಾಂಡ್ ಸ್ಕೇಪ್) ಮತ್ತು ಸಾಹಸ. ಈ ವರ್ಗಗಳಡಿ ಫೋಟೋ ಕಳುಹಿಸಿಕೊಡಬಹುದಾಗಿದೆ. ಬಳ್ಳಾರಿ ಜಿಲ್ಲೆಯ ಪ್ರವಾಸಿತಾಣಗಳಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಚಾರವನ್ನು ನೀಡಲು ಜಿಲ್ಲೆಯ ಎಲ್ಲಾ ಛಾಯಾಗ್ರಾಹಕರು, ಸಾರ್ವಜನಿಕರು ಹಾಗೂ ಪ್ರವಾಸಿಗರು ಸಹಕರಿಸುವಂತೆ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ ಕೋರಿದ್ದಾರೆ.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

■ **ಹಂಪಿ ಟೈಮ್ಸ್ ಬಳ್ಳಾರಿ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2024-25ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಶುಲ್ಕ ಮರುಪಾವತಿ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಮೇ 31 ರ ವರೆಗೆ ವಿಸ್ತರಿಸಲಾಗಿದೆ.

ಅರ್ಜಿ ಸಲ್ಲಿಸಲು ವೆಬ್‌ಸೈಟ್ https://ssp.postmatric.karnataka.gov.in ಗೆ ಭೇಟಿ ನೀಡಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.08392-275751 ಹಾಗೂ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ದೂ.1902 ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಭಾನುಮತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೈಕ್ರೋ ನ್ಯೂಸ್

### ಏ.12 ರಂದು ಹಂಪಿಯಲ್ಲಿ ಜೋಡಿ ಬ್ರಹ್ಮರಥೋತ್ಸವ

**ಹಂಪಿ ಟೈಮ್ಸ್ ಹೊಸಪೇಟೆ:**

ಐತಿಹಾಸಿಕ ಹಂಪಿಯ ಶ್ರೀವಿರೂಪಾಕ್ಷೇಶ್ವರ ಸ್ವಾಮಿ ಮತ್ತು ಶ್ರೀಚಂದ್ರಮೌಳೇಶ್ವರ ಸ್ವಾಮಿಯ ಜೋಡಿ ಬ್ರಹ್ಮರಥೋತ್ಸವ ಏ.12 ರಂದು ಜರುಗಲಿದೆ ಎಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ ತಿಳಿಸಿದ್ದಾರೆ.

ಹಂಪಿಯಲ್ಲಿ ಏ.6 ರಿಂದ ಏ.14 ರವರೆಗೆ ಹಂಪಿ ಜಾತ್ರಾ ಮಹೋತ್ಸವವು ಹಂಪಿ ಕ್ಷೇತ್ರದ ಪೀಠಾಧಿಪತಿಗಳಾದ ಶ್ರೀವಿದ್ಯಾರಣ್ಯ ಭಾರತಿ ಸ್ವಾಮಿಗಳ ಮಾರ್ಗದರ್ಶನದಲ್ಲಿ ಏ.12 ರಂದು ಜೋಡಿ ಬ್ರಹ್ಮ ರಥೋತ್ಸವ ಜರುಗಲಿದೆ. ಶ್ರೀಕೃಷ್ಣದೇವರಾಯರು ಅರ್ಪಿಸಿದ ಚಿನ್ನದ ಕಿರೀಟವನ್ನು ಏ.10 ರಿಂದ ಏ.14 ರವರೆಗೆ ಅಲಂಕಾರ ಮಾಡಲಾಗುವುದು. ಎಲ್ಲಾ ಭಕ್ತಾದಿಗಳಿಗೆ ಉಚಿತ ಅನ್ನದಾಸೋಹ ಪ್ರಸಾದ ವಿತರಣೆ ಮಾಡಲಾಗುತ್ತದೆ. ಜಾತ್ರಾ ಮಹೋತ್ಸವಕ್ಕೆ ಹಾಗೂ ರಥೋತ್ಸವಕ್ಕೆ ಹೆಚ್ಚಿನ ಸಂಖ್ಯೆಯ ಭಕ್ತಾದಿಗಳು ಭಾಗವಹಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗುವಂತೆ ತಿಳಿಸಲಾಗಿದೆ.

### ನವೋದಯ ಶಾಲೆಗೆ ಮಧುಲತಾ ಜಿ ಆಯ್ಕೆ

**ಹಂಪಿ ಟೈಮ್ಸ್ ಕೂಡ್ಲಿಗಿ:**



ತಾಲೂಕಿನ ಗಡಿ ಗ್ರಾಮದ ತಿಪ್ಪೇಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ, ಮಧುಲತಾ.ಜಿ ಜವಾಹರ ನವೋದಯ ಶಾಲೆಗೆ ಆಯ್ಕೆಯಾಗಿದ್ದಾಳೆ ಎಂದು ಶಾಲಾ ಮುಖ್ಯಗುರು ಟಿ.ಸುರೇಶಕುಮಾರ್ ತಿಳಿಸಿದ್ದಾರೆ. 2025-26ನೇ ಸಾಲಿಗೆ ಜರುಗಿದ ಪರೀಕ್ಷೆಯಲ್ಲಿ ಮಧುಲತಾ.ಜಿ, ಆಯ್ಕೆಯಾಗಿದ್ದು, ಸಣ್ಣ ಗಂಗಾಧರ-ವಿಜಯಮ್ಮ ತಿಪ್ಪೇಹಳ್ಳಿ ಇವರ ಪುತ್ರಿಯಾಗಿದ್ದಾಳೆ. ವಿದ್ಯಾರ್ಥಿನಿಯ ಸಾಧನೆಗೆ ತಿಪ್ಪೇಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷ ಎನ್,ನಾಗರಾಜ್ ಉಪಾಧ್ಯಕ್ಷರು ಹಾಗೂ ಸರ್ವ ಸದಸ್ಯರು ಬಿಸಿ ಊಟ ಸಹಾಯಕರು ಮತ್ತು ಶಿಕ್ಷಣ ಪ್ರೇಮಿಗಳು ಗ್ರಾಮಸ್ಥರು, ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು ಅಭಿನಂದಿಸಿದ್ದಾರೆ.

## ಗರ್ಭಿಣಿಯರು ಮಧ್ಯಾಹ್ನ ಅವಧಿಯಲ್ಲಿ ಮನೆಯಿಂದ ಹೊರಗಡೆ ಓಡಾಡದಿರಿ

### ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಸಲಹೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯಲ್ಲಿ ಬಿಸಿಲಿನ ಪ್ರಖರತೆ ಹೆಚ್ಚಾಗಿ ಕಂಡುಬರುತ್ತಿರುವ ಹಿನ್ನಲೆಯಲ್ಲಿ ಗರ್ಭಿಣಿ ಮಹಿಳೆಯರು ಮಧ್ಯಾಹ್ನ ಅವಧಿಯಲ್ಲಿ ಮನೆಯಿಂದ ಹೊರಗಡೆ ಓಡಾಡಬಾರದು. ಹೆಚ್ಚಾಗಿ ನೀರು ಕುಡಿಯಲು ಆದ್ಯತೆ ನೀಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಹೇಳಿದರು.

ಮಂಗಳವಾರದಂದು ಕುರುಗೋಡು ತಾಲ್ಲೂಕಿನ ಕೋಳೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಮಾತನಾಡಿದ ಅವರು, ಮಧ್ಯಾಹ್ನ 12 ರಿಂದ 3 ಗಂಟೆ ಅವಧಿಯಲ್ಲಿ ಬಿಸಿಲಿನ ತೀವ್ರತೆಯು ಹೆಚ್ಚು ಕಂಡುಬರುತ್ತಿದ್ದು, ಗರ್ಭಿಣಿಯರು ಮನೆಯಲ್ಲಿಯೇ ಇರುವ ಮೂಲಕ ಆರೋಗ್ಯದ ಕಾಳಜಿಗೆ ಕುಟುಂಬದ ಸದಸ್ಯರು ಸಹ ಮತುವರ್ಜಿ ವಹಿಸಬೇಕು ಎಂದು ತಿಳಿಸಿದರು.

ಗರ್ಭಿಣಿ ಮಹಿಳೆಯು ಮಧ್ಯಾಹ್ನದ ಅವಧಿಯಲ್ಲಿ ಮನೆ ಯಿಂದ ಹೊರಗಡೆ ಕೆಲಸ ಕಾರ್ಯಗಳನ್ನು ಮಾಡಬಾರದು. ದೇಹದಲ್ಲಿ ನೀರಿನಾಂಶ ಕೊರತೆ ಯಿಂದ ಆಗಬಹುದಾದ ಅನಾನುಕೂಲತೆಗಳನ್ನು ತಡೆಗಟ್ಟಲು ಸಹಕರಿಸಬೇಕು ಎಂದರು.

ಬೇಸಿಗೆ ಹಿನ್ನಲೆಯಲ್ಲಿ ಬಾಣಂತಿಯರು ಸಹ ನವಜಾತ ಶಿಶುವಿಗೆ ತಾಯಿ ಹಾಲು ನೀಡಬೇಕು. ಬೇರೆ ಏನನ್ನೂ ಕೊಡಬಾರದು. ತಾಯಿ ಹಾಲಿನಲ್ಲಿ ಸಾಕಷ್ಟು ನೀರಿನಾಂಶ ಇರುವುದರಿಂದ ದಿನಕ್ಕೆ ಕನಿಷ್ಠ 10 ರಿಂದ 12 ಬಾರಿ ಅಥವಾ ಮಗು ಅತ್ತಾಗಲೆಲ್ಲಾ ಹಾಲುಣಿಸಬೇಕು ಎಂದು ಸೂಚಿಸಿದರು.

ಈಗಾಗಲೇ ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರ ನಿರ್ಜಲೀಕರಣ ತಡೆಗಾಗಿ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಓ.ಆರ್.ಎಸ್. ಕಾರ್ನರ್ ಮಾಡಲಾಗಿದ್ದು, ಆಸ್ಪತ್ರೆ ಭೇಟಿ ಸಂದರ್ಭದಲ್ಲಿ ಓ.ಆರ್.ಎಸ್ ದ್ರಾವಣ ಸೇವಿಸುವ ಮೂಲಕ ದೇಹದಲ್ಲಿ ನಿರ್ಜಲೀಕರಣದಿಂದಾಗುವ ಅಪಾಯಗಳನ್ನು ತಪ್ಪಿಸಬಹುದಾಗಿದೆ ಎಂದು ತಿಳಿಸಿದರು.

ಈಗಾಗಲೇ ಬಿಸಿಲಿನ ಶಾಖಾಘಾತದಿಂದ ಸಂಭವಿಸಬಹುದಾದ ತೊಂದರೆಯನ್ನು ತಪ್ಪಿಸಲು ಮತ್ತು ತಕ್ಷಣ ಚಿಕಿತ್ಸೆ ನೀಡಲು ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಲಾ 01 ಬೆಡ್ ಮತ್ತು >>3


For Ads
Contact:
94486 33038


## ಜು.12 ರಾಷ್ಟ್ರೀಯ ಲೋಕ್ ಅದಾಲತ್

■ **ಹಂಪಿ ಟೈಮ್ಸ್ ಬಳ್ಳಾರಿ**



ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಜುಲೈ 12 ರಂದು ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ನಡೆಸಲಾಗುವುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ತಿಳಿಸಿದ್ದಾರೆ.

ಸಾರ್ವಜನಿಕರು ತಮ್ಮ ವ್ಯಾಜ್ಯಪೂರ್ವ, ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, ಚೆಕ್ ಪ್ರಕರಣಗಳು, ಬ್ಯಾಂಕ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ವೈವಾಹಿಕ ಹಾಗೂ ಕೌಟುಂಬಿಕ ಪ್ರಕರಣಗಳು, ಸಿವಿಲ್ ಪ್ರಕರಣಗಳು ಹಾಗೂ ಇತರೆ ರಾಜಿಯಾಗಬಹುದಾದ ಪ್ರಕರಣಗಳನ್ನು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ಜುಲೈ 12 ರಂದು ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್ ಮೂಲಕ ಶೀಘ್ರವೇ ಇತ್ಯರ್ಥಗೊಳಿಸಿ ಪರಿಹಾರ ಪಡೆದುಕೊಳ್ಳಲು ಸುವರ್ಣ ಅವಕಾಶವಾಗಿದೆ. ಸಾರ್ವಜನಿಕರು ಹಾಗೂ ಕಕ್ಷಿದಾರರು ಇದರ ಪ್ರಯೋಜನ ಪಡೆದುಕೊಂಡು ತಮ್ಮ ವಿವಾದಗಳನ್ನು ಅಂತ್ಯಗೊಳಿಸಬಹುದು ಎಂದು ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ಲೋಕ್ ಅದಾಲತ್ ಅಂಗವಾಗಿ ಪ್ರತಿದಿನ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ಪೂರ್ವಭಾವಿ ಬೈಠಕ್‌ಗಳು ನಡೆಯುತ್ತಲಿವೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿ ಅಥವಾ ದೂ.08392-278077 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
SSLC ವಿದ್ಯಾರ್ಥಿಗಳಿಗಾಗಿ
ಹೈಸ್ಕೋರ್ ಮತ್ತು ಸರಳ ಅಭ್ಯಾಸಕ್ಕೆ ತಜ್ಞ ಶಿಕ್ಷಕರಿಂದ ಸುಲಭ ಅಂಶಗಳು
ನಿಮ್ಮ ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿ
scan to read epaper
9 ಜುಲೈ 2024 ರಿಂದ ಪ್ರತಿದಿನ
ನಿಮ್ಮ ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿ ಇನ್ಸ್ಟಾಲ್ ಮಾಡಿಕೊಳ್ಳಿ!




ಹಾರ್ದಿಕ ಅಭಿನಂದನೆಗಳು


ಜವಾಹರ ನವೋದಯ ಶಾಲೆಗೆ ಆಯ್ಕೆಯಾದ ವಿದ್ಯಾರ್ಥಿನಿ
ಕೂಡ್ಲಿಗಿ ತಾಲೂಕಿನ ತಿಪ್ಪೇಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ, ಜಿ ಮಧುಲತಾ 2025-26ನೇ ಸಾಲಿಗೆ ಜರುಗಿದ ಜವಾಹರ ನವೋದಯ ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಶಾಲೆಗೆ ಆಯ್ಕೆಯಾಗಿದ್ದಾಳೆ. ತಂದೆ, ತಾಯಿ, ಮಾರ್ಗದರ್ಶಿ ಶಿಕ್ಷಕರು ಹಾಗೂ ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ ವಿದ್ಯಾರ್ಥಿನಿಗೆ ಹೃದಯಪೂರ್ವಕ ಅಭಿನಂದನೆಗಳು
-: ಅಭಿನಂದಿಸುವವರು :-
ತಿಪ್ಪೇಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ
ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು,
ಮುಖ್ಯ ಶಿಕ್ಷಕರು ಹಾಗೂ ಸಹ ಶಿಕ್ಷಕರು, ಶಿಕ್ಷಣ ಪ್ರೇಮಿಗಳು, ಗ್ರಾಮಸ್ಥರು.
ತಂದೆ: ಸಣ್ಣ ಗಂಗಾಧರ ತಿಪ್ಪೇಹಳ್ಳಿ, ತಾಯಿ : ವಿಜಿಯಮ್ಮ

ಹಂಪಿ ಟೈಮ್ಸ್
HAMPI TIMES

# ಚಾಂದ್ರಮಾನ ಯುಗಾದಿಯಲ್ಲಿ ಬಿದಿಗೆ ಚಂದ್ರ ದರ್ಶನದ ಮಹತ್ವ

ಹಿಂದೂಗಳ ಹೊಸ ವರ್ಷದ ಆಚರಣೆ ಶುರುವಾಗುವುದೇ ಯುಗಾದಿಯ ಪವಿತ್ರ ದಿನದಿಂದ. ಯುಗಾದಿಯು ಹಿಂದೂಗಳಿಗೆ



ಅತಿ ದೊಡ್ಡ ಹಬ್ಬವಾಗಿದೆ. ಚೈತ್ರ ಮಾಸ ಶುಕ್ಲ ಪಕ್ಷದ ಪಾಡ್ಯದ ದಿನದಂದು ಬರುವುದೇ ಚಾಂದ್ರಮಾನ ಯುಗಾದಿ. ಚಾಂದ್ರಮಾನ ಯುಗಾದಿ ಪಾಡ್ಯದ ಮರುದಿನ ಬರುವ ಬಿದಿಗೆ ಚಂದ್ರನು ಸಕಲ ದೋಷ, ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಿ, ಹೊಸ ವರ್ಷವು ಸುಲಲಿತವಾಗಿರುವಂತೆ ಹರಸುವನು ಎಂಬ ನಂಬಿಕೆಯಿದೆ ಹಾಗಾಗಿ ಬಿದಿಗೆ ಚಂದ್ರನ ದರ್ಶನಕ್ಕೆ ಮಹತ್ತರವಾದ ಸ್ಥಾನವಿದೆ.

ಯುಗಾದಿಯಲ್ಲಿ ಬೇವು– ಬೆಲ್ಲಕ್ಕೆ ಇರುವಷ್ಟೇ ಸ್ಥಾನವು ಬಿದಿಗೆ ಚಂದ್ರ ದರ್ಶನಕ್ಕೂ ಇದೆ. ಬಿದಿಗೆ ಚಂದ್ರ ದರ್ಶನವನ್ನು ಮಾಡಿದರೆ ಸಕಲ ಪಾಪ, ದೋಷಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆಯಿದೆ ಆದರೆ ಅಮವಾಸ್ಯೆ ಕಳೆದ ನಂತರ ಬಿದಿಗೆ ಚಂದ್ರನು ಕಾಣ ಸಿಗುವುದೇ ಬಹಳ ಅಪರೂಪ. ಬಿದಿಗೆ ಚಂದ್ರನನ್ನು ಕಂಡರೆ ನಮ್ಮ ಭಾಗ್ಯವೇ ಸರಿ ಹಾಗಾಗಿ ಬಿದಿಗೆಯ ಸಂಜೆ ಒಂದೇ ಒಂದು ಘಳಿಗೆ ಗೋಚರವಾಗುವ ಚಂದ್ರ ದರ್ಶನಕ್ಕೆ ಜನರು ಕಾತರದಿಂದ ಕಾಯುತ್ತಿರುತ್ತಾರೆ. ಚಂದ್ರ ದರ್ಶನದ ನಂತರ ಗುರು–ಹಿರಿಯರಿಗೆ ನಮಸ್ಕರಿಸಿ, ದೇವಸ್ಥಾನಕ್ಕೆ ತೆರಳಿ ಪುನೀತರಾಗುತ್ತಾರೆ.



ಬಿದಿಗೆ ಚಂದ್ರನು ಸಣ್ಣ ಗೆರೆಯಂತೆ ಗೋಚರಗೊಳ್ಳುತ್ತಾನೆ. ಅಂದೆಲ್ಲಾ ಬಿದಿಗೆ ಚಂದ್ರನ ಆಕಾರ, ಗುಣ ಲಕ್ಷಣಗಳನ್ನು ನೋಡಿ ವರ್ಷದ ಮಳೆ, ಬೆಳೆ, ಆಗು–ಹೋಗುಗಳನ್ನೆಲ್ಲಾ ಲೆಕ್ಕಾಚಾರ ಮಾಡಿ ಪಂಚಾಂಗವನ್ನು ಮಾಡುತ್ತಿದ್ದರೆಂಬ ಮಾತಿದೆ.

"ಚೌತಿಯ ಚಂದ್ರನನ್ನು ನೋಡಬಾರದು ಬಿದಿಗೆ ಚಂದ್ರನನ್ನು ಬಿಡಬಾರದು" ಎಂಬ ಮಾತಿದೆ. ಬಿದಿಗೆ ಚಂದ್ರನ ಮಹತ್ವನ್ನು ಸಾರುವ ಒಂದು ಪೌರಾಣಿಕ ಕಥೆಯೂ ಇದೆ. ಗಣಪತಿ ದೇವರು ತಮ್ಮ ವಾಹನವಾದ ಇಲಿಯನ್ನೇರಿ ಹೋಗುವಾಗ ಆಕಾಶದಲ್ಲಿನ ಚಂದ್ರನು ಗಣಪತಿ ದೇವರನ್ನು ಅಪಹಾಸ್ಯ ಮಾಡಿ, ಗಹಗಹಿಸಿ ನಕ್ಕನಂತೆ. ಆಗ ಕೋಪಗೊಂಡ ಗಣಪತಿ ದೇವರು, ಗಣಪತಿ ದೇವರು ಹುಟ್ಟಿದ ದಿನ ಎಂದರೆ ಭಾದ್ರಪದ ಮಾಸದ ಶುಕ್ಲ ಪಕ್ಷದ ಚೌತಿಯ ದಿನದಂದು ಯಾರು ಚಂದ್ರನ ದರ್ಶನ ಮಾಡುತ್ತಾರೋ ಅವರಿಗೆ ಅಪವಾದಗಳು ಬರಲಿ ಎಂದು ಶಾಪ ಕೊಟ್ಟರಂತೆ. ಗಣಪತಿ ದೇವರು ಕೊಟ್ಟ ಶಾಪದ ಮರುಕ್ಷಣದಿಂದ ಚಂದ್ರನಿಗೆ ಪಶ್ಚಾತ್ತಾಪವಾಗಿ ಗಣಪತಿ ದೇವರಲ್ಲಿ ಕ್ಷಮೆ ಕೇಳಿದನಂತೆ. ಆಗ ಸಂತುಷ್ಟರಾದ ಗಣಪತಿ ದೇವರು ಚೌತಿಯ ಚಂದ್ರ ದರ್ಶನದ ಅಪವಾದ ಬಿದಿಗೆ ಚಂದ್ರನನ್ನು ನೋಡಿ ಶಮನವಾಗಲಿ ಎಂದು ಆಶಿಸಿದರಂತೆ. ಹಾಗಾಗಿ ಬಿದಿಗೆ ಚಂದ್ರನ ದರ್ಶನಕ್ಕೆ ಬಹಳ ಮಹತ್ವವಿದೆ.

ಚಂದ್ರನು ಸಚ್ಚಾರಿತ್ರ್ಯ ಹಾಗೂ ಪರಿಶುದ್ಧತೆಯ ಸಂಕೇತ. ಸೂರ್ಯ ಚಂದ್ರರೇ ನಮ್ಮ ಕಣ್ಣಿಗೆ ಕಾಣುವ ದೇವರುಗಳು. ಸೂರ್ಯನನ್ನು ತಂದೆಗೆ ಹೋಲಿಸಿದರೆ, ಚಂದ್ರನನ್ನು ತಾಯಿಗೆ ಹೋಲಿಸುತ್ತಾರೆ. ಜ್ಯೋತಿಷ್ಯದಲ್ಲಿ ಚಂದ್ರನಿಗೆ ಮನಕಾರಕ ಎನ್ನುತ್ತಾರೆ ಎಂದರೆ ಚಂದ್ರನು ಮನಸ್ಸಿನ ಅಧಿಪತಿ ಹಾಗಾಗಿ ಚಂದ್ರನ ಕೃಪೆಯಿದ್ದರೆ ಮನೋಬಲವೂ ಹೆಚ್ಚಾಗುತ್ತದೆ, ಮನದಲ್ಲಿ ಅಂಜಿಕೆ ಇರದೇ ಧೈರ್ಯ ಮೂಡುತ್ತದೆ ಹಾಗಾಗಿ ಬಿದಿಗೆ ಚಂದ್ರನ ದರ್ಶನಕ್ಕೆ ಅಷ್ಟೊಂದು ಮಹತ್ತರವಾದ ಸ್ಥಾನವಿದೆ.

**– ಪ್ರಜ್ಞಾ ರವೀಶ್ ಕುಳಮರ್ವ, ಕಾಸರಗೋಡು.**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಜೂಜಾಟದ ಮೋಹ ಮನುಷ್ಯನ ಅಸ್ಮಿತೆ ನಾಶ

## ಜೂಜಾಟ ನಿಷೇಧಕ್ಕೆ ಬೇಕಿದೆ ಕಠಿಣ ಕಾನೂನು | ಅನೇಕರನ್ನು ತಲ್ಲಣಗೊಳಿಸಿದ ಆನ್ಲೈನ್ ಹನಿಟ್ರಾಪ್

## ವೀಡಿಯೋ ಕರೆಗಳಿಂದ ರೆಕಾರ್ಡಿಂಗ್ ಮಾಡಿ ನಂತರ ಹೆದರಿಸಿ ಆನ್ಲೈನ್‌ನಲ್ಲೇ ಹಣ ವಸೂಲಿ

ಮನುಷ್ಯ ಸಮಾಜ ಜೀವಿ ಎಂದು ಹೇಳಿಕೊಳ್ಳುವ ನೆಲೆಯಲ್ಲಿಯೇ ಆತ ಲೋಕದ ಆಸೆ–ಆಕಾಂಕ್ಷೆಯನ್ನು ಹೊಂದಿದವನು ಆಗಿದ್ದಾನೆ. ಮುಖ್ಯವಾಗಿ ಬದುಕಬೇಕು ಅದು ಉನ್ನತವಾಗಿ ಅನ್ನೋದು ಅವನ ಮನಸ್ಸಿನ ವಿವೇಕವು ಆಗಿದೆ. ಆದರೆ ಇಲ್ಲಿ ಹಣವೆ ಎಲ್ಲ ರೀತಿಯ ಜೀವನ ವಿಧಾನಕ್ಕೆ ದಾರಿಯಾಗಿದೆ. ಪ್ರತಿಯೊಬ್ಬರು ದುಡಿಯುವುದು ಸಂಬಳಕ್ಕಾಗಿ ಅಂದರೆ ಒಂದು ನಿಗದಿತ ಹಣಕ್ಕಾಗಿ ಅಷ್ಟೇ. ಆದರೆ ಹಣವನ್ನು ಮಾಡುವುದು ಹೇಗೆ?. ಬೇಗ ಶ್ರೀಮಂತನಾಗುವುದು ಹೇಗೆ, ತನ್ನ ಕಷ್ಟಗಳನ್ನು ಕಳೆದುಕೊಂಡು ಉನ್ನತ ಬದುಕು ಮಾಡುವುದು ಹೇಗೆ ಎಂದು ದಿನ ಯೋಚಿಸುವವರಲ್ಲಿ ಕೆಲವರಾದರೂ ಜೂಜಿಗೆ ಇಳಿತ್ತಾರೆ. ಜೂಜು ಎನ್ನುವುದು ಆಧುನಿಕವಾದ ಪರಿಕಲ್ಪನೆ ಅಲ್ಲ ಅದು ಮನುಷ್ಯನ ಸಂಸ್ಕೃತಿಯ ಒಟ್ಟಿಗೆ ಬೆಳೆಯುತ್ತ ಬಂದಿದೆ. ಸಾಮಾನ್ಯವಾಗಿ ಪಂಥ ಕಟ್ಟುವುದು ಎಂದು ಹೇಳಲಾಗುತ್ತದೆ. ಆಟ–ಓಟ, ಕೆಲಸ–ಕಾರ್ಯಗಳ ಜೊತೆಯಲ್ಲಿ ತನ್ನ ಜೊತೆಗಾರರು ಹಾಗೂ ಕೋಳಿ, ದನ, ಎತ್ತುಗಳ ಸಾಮರ್ಥ್ಯವನ್ನು ಎದುರಾಳಿಯ ಮುಂದೆ ಪ್ರದರ್ಶನ ಮಾಡಿ ಗೆದ್ದರೇ ಹೆಣ್ಣು, ಹೊನ್ನು, ಮಣ್ಣುಗಳ ಜೊತೆಯಲ್ಲಿ ಗೌರವ ಸನ್ಮಾನಗಳು ನಡೆಯುತ್ತಿದ್ದವು. ಮಹಾಭಾರತದಲ್ಲಿ ಪಾಂಡವವರು ಜೂಜಿನಲ್ಲಿ ಎಲ್ಲವನ್ನು ಕಳೆದುಕೊಂಡದ್ದು, ರಾಜ–ಮಹಾರಾಜರ ಆಸ್ಥಾನದಲ್ಲಿ ಪಂಡಿತರು ಪಂಥವನ್ನು ಕಟ್ಟಿ ವಾದ ಮಾಡಿ ಗೆದದ್ದು–ಸೋತದ್ದು, ಸಾಮಾನ್ಯರು ಕೋಳಿ ಜೂಜು, ಎತ್ತಿನ ಜೂಜು, ಕಾಯಿ ಜೂಜು, ಚೆಂಡಿನ ಜೂಜಿನಲ್ಲಿ ತನ್ನ ಹಣವೆಲ್ಲ ಕಳೆದುಕೊಂಡು ಹೆಂಡತಿ ಮಕ್ಕಳನ್ನು ಬೀದಿಗೆ ನೂಕಿ ಕೊನೆಗೆ ಅನಿವಾರ್ಯವಾಗಿ ಜೀವ ತೆಗೆದುಕೊಂಡ ಅದೆಷ್ಟೋ ಘಟನೆಗಳಿವೆ.

ಜನಪದ ಕತೆಯಾದ ಮದಲಿಂಗನ ಕಣಿವೆ ಎನ್ನುವುದರಲ್ಲಿ ಮದಲಿಂಗ ತನ್ನ ಹೆಂಡತಿಯ ತಂಗಿಯನ್ನು ಲಗ್ನವಾಗುತ್ತೇನೆ



ಡಾ.ಸುಬ್ರಹ್ಮಣ್ಯ ಸಿ ಕುಂದೂರು
ಲೇಖಕರು, ಮಂಗಳೂರು

Scan For Digital Colourful
HAMPI TIMES E-paper

ಅಂದಾಗ ಅವಳ ತಾಯಿ ನೀನು ಎರಡು ಹೆಂಡಿರನ್ನು ಆಳುವ ಗಂಡಸ್ಸು ಆಗಬೇಕಾದರೆ ಈ ಕಣಿವೆಯನ್ನು ಹಿಂದೆ–ಹಿಂದೆಯೇ ಹತ್ತಿ ಇಳಿದರೆ ಇವಳನ್ನು ಲಗ್ನ ಮಾಡಿಕೊಡುತ್ತೇನೆ ಅನ್ನುವ ಪಂಥವನ್ನು ಅತ್ತೆ ತನ್ನ ಅಳಿಯನಿಗೆ ಹಾಕುತ್ತಾಳೆ. ಹೀಗೆ ಪರಂಪರೆಯ ಸತ್ವವ ಒಳಗೊಂಡಿದ್ದ ಜೂಜು ಆಟವು ಆಗಿತ್ತು ಹಣ ಮಾಡುವ ಗೀಳು ಆಗಿತ್ತು. ಆದರೆ ಈ ಆಧುನಿಕ ಪರಿಸರದಲ್ಲಿ ಅದರಲ್ಲೂ ಕೊರೊನ ಬಂದ ತರುವಾಯ ಎಲ್ಲರೂ ತಮ್ಮ



ಕಾಯಕದಿಂದ ವಂಚಿತರಾಗಿ ಮನೆಯಲ್ಲಿಯೇ ಕೂರುವಂತಾಯಿತು. ಹಣ ಕೈಯಲ್ಲಿ ಇರಲಿಲ್ಲ ಇಂತಹ ಕಾಲದಲ್ಲಿ ಹಣ ಮಾಡುವುದು ಹೇಗೆ ಎನ್ನುವ ದಾರಿಗಳನ್ನು ಹುಡುಕಿದರು. ಅನೇಕರು ಹಣ ಮಾಡುವುದು ಹೇಗೆ ಎಂದು ಭಾಷಣ ಮತ್ತು ಪುಸ್ತಗಳನ್ನು ಬರೆದರು ಮತ್ತು ಅವರು ದುಡ್ಡು ಮಾಡಿಕೊಂಡರೇ ವಿನಃ ಹಣ ಮಾಡುವ ತಂತ್ರ ಯಾರಿಗೂ ದಕ್ಕಲಿಲ್ಲ. ವ್ಯಾಪಾರಿಯೊಬ್ಬನಲ್ಲಿ ನೀವು ಹೇಗೆ ವ್ಯಾಪಾರ ಮಾಡುತ್ತಿದ್ದೀರಿ ಅಂತ ಕೇಳಿದರೆ ಆತ ಎಂದಿಗೂ ತನ್ನ ಒಳಗುಟ್ಟನ್ನು ಹೇಳುವುದಿಲ್ಲ, ನಾಟಿ ಮದ್ದು ಕೊಡುವ ವೈದ್ಯ ತನ್ನ ಮದ್ದಿನ ಬಗ್ಗೆ ವಿವರಿಸುವುದಿಲ್ಲ ಹೀಗಿರುವಾಗ ಹಣ ಮಾಡುವ ತಂತ್ರವನ್ನು ಆತ ಮಾಡಿದ್ದರೆ ಹೇಳುತ್ತಾನೆಯೇ! ಹಣ ಮಾಡಿದವರು ಹೇಗೆಲ್ಲ ಮುಚ್ಚಿಡುತ್ತಾರೆ ಅನ್ನೋ ಅರಿವು ನಮಗಿದೆ ಅಲ್ಲವೆ. ಹೀಗೆ ಇರುವ ಕಾಲಮಾನದಲ್ಲೂ ಹಣವನ್ನು ಮಾಡುವ ಜೂಜು ವಿಭಿನ್ನ ಮಾದರಿಯಲ್ಲಿ ಆನ್ಲೈನ್ ಮೂಲಕ ಅಂತರಾಷ್ಟ್ರೀಯ ಮಟ್ಟದಿಂದ ಜನ ಸಾಮಾನ್ಯರ ಮಟ್ಟಕ್ಕೆ ಮುಟ್ಟಿತು.

ಮೊನ್ನೆ ವಿಧಾನ ಸಭೆಯಲ್ಲಿ ಹನಿಟ್ರ್ಯಾಪ್ ಎನ್ನುವು ವಿಚಾರ ಬಹುಮಟ್ಟಿನ ಚರ್ಚೆಯಾಯಿತು, ಇದಕ್ಕಿಂತ ಸಾಮಾನ್ಯರ ಮೇಲೆ ಆನ್ಲೈನ್ ಹನಿಟ್ರಾಪ್ಗಳು ನಡೆಯುವುದು ಒಂದು ಜೂಜಾಗಿದೆ. ಇದರಲ್ಲಿ ಅಷ್ಟೋ ಮಂದಿ ಹಣವನ್ನು, ಕೆಲವರು ಜೀವವನ್ನು ಕಳೆದುಕೊಂಡಿದ್ದಾರೆ. ನಮ್ಮ ಮೊಬೈಲ್ ಫೋನ್ಗೆ ವಿಡಿಯೋ ಕರೆಗಳು ಬರುತ್ತವೆ ಅದನ್ನು ಸ್ವೀಕಾರ ಮಾಡಿದ ಕೂಡಲೇ ಅತ್ತ ಕಡೆಯಿಂದ ಒಬ್ಬಳು ವಸ್ತ್ರವಿಲ್ಲ ಬೆತ್ತಲಾದ ಹುಡುಗಿ ಹಾಯ್ ಅಂತ ಮಾತನಾಡಿಸುತ್ತಾಳೆ ನಂತರ ನಮ್ಮನ್ನು ವಸ್ತ್ರವನ್ನು ಕಳೆಯುವಂತೆ ಹೇಳಿ ಮತ್ತೆ ನಕ್ಕು ನಗಿಸಿ ನಮ್ಮ ವಸ್ತ್ರವಿಲ್ಲದ ದೇಹದ ಚಿತ್ರಗಳನ್ನು ರೇಕಾರ್ಡ ಮಾಡಿಕೊಂಡು ಕರೆ ಮುಕ್ತಾಯವಾಗುತ್ತದೆ. ಇಲ್ಲಿಗೆ ಮುಗಿಯುವುದಿಲ್ಲ ಆಟ ಶುರುವಾಗುವುದು ಇಲ್ಲಿಂದ. ಮರು ದಿನ ಕರೆಮಾಡಿ ನಮ್ಮ ವಿಡಿಯೋವನ್ನು ಅನ್ಲೈನ್ ಖಾತೆಗಳಲ್ಲಿ ಬಿತ್ತರಿಸುತ್ತೇವೆ. ಅಂತ ಹೆದರಿಸಿ ಸೂಕ್ತ ಹಣವನ್ನು ವಸೂಲು ಮಾಡಿದ ಅದೇಷ್ಟೋ ಘಟನೆಗಳು ಇದೆ. ಕೆಲವರು ಮಾನ–ಮರ್ಯಾದೆಗೆ ಹೆದರಿ ಸತ್ತವರು ಇದ್ದಾರೆ. ಊರು ಬಿಟ್ಟವರೂ ಇದ್ದರೆ. ಇಲ್ಲಿ ಖಾಸಗಿ ವಿಚಾರವನ್ನು ದೂರಿನ ರೂಪದಲ್ಲಿ ಕೊಡುವುದಕ್ಕೆ ಜನರ ಮನೋಭಾವ ಪಕ್ವವಿಲ್ಲದ ಕಾರಣದಿಂದ ಇಂತಹದ್ದು ನಡೆಯುತ್ತದೆ. ದೂರು ನೀಡಿದರೂ ಅಂತವರನ್ನು ಹಿಡಿದು ಶಿಕ್ಷೆಗೆ ಒಳಗು ಮಾಡಿದ ಘಟನೆಗಳು ನಮ್ಮ ಮುಂದೆ ಇಲ್ಲ ಎನ್ನುವುದು ಖೇದಕರವಾಗಿದೆ.


ಹೆಚ್ಚು ಜನರನ್ನು ಅವಲಂಬಿಸಿದ ಜೂಜು ಅಂದರೆ ಜೈನ್ಲಿಂಕ್ ಬಿಸನೆಸ್ ಇದು ಹುಟ್ಟಿಕೊಂಡಿದ್ದು ಸಾಮಾನ್ಯರ ಹಣವನ್ನು ದೋಚುವುದಕ್ಕೆ ಯಾವುದೋ ವಿದೇಶಿ ಕಂಪನಿಯ ಹೆಸರಿನಲ್ಲಿ ಪರಿಚಯವಾದ ಸಂಸ್ಥೆಯು ಎರಡು ಸಾವಿರ ಕಟ್ಟಿಸಿ ಸೇರಿಕೊಂಡು ನಂತರದಲ್ಲಿ ತನ್ನ ಎಡ–ಬಲದಲ್ಲಿ ಒಬ್ಬೊರಂತೆ ಜನರನ್ನು ಸೇರಿಸುತ್ತ ಹೋಗುವುದು ಹಾಗೆಯೇ ಸೇರಿದವರು ತನ್ನ ಎಡ–ಬಲದಲ್ಲಿ ಜನರನ್ನು ಸೇರಿಸುತ್ತ ಹಣವನ್ನು ಕಟ್ಟಿಸುತ್ತ ಹೋದಂತೆ ಚೂರು ಚೂರು ಹಣ ಖಾತೆಗೆ ಬಂದು ನಂಬಿಕೆಯನ್ನು ಹುಟ್ಟಿಸಿ ಕೆಲವು ದಿನದಲ್ಲಿ ಕಂಪನಿಯೇ ಹೇಳಹೆಸರಿಲ್ಲದೇ ಮಾಯವಾಗಿ ದುಡ್ಡು ಕಟ್ಟಿದವರು ಬೈದಾಡಿಕೊಂಡು, ಜಗಳವಾಡಿ, ಹರಕೆ ಹೇಳಿಕೊಂಡು ಕೊನೆಗೆ ಹಣವನ್ನು ತಿಂದ ಅನ್ನೋ ಹಣೆಪಟ್ಟಿಯೊಂದಿಗೆ ನಡೆಯ ಬೇಕಾದ ಅಷ್ಟೋ ಸಂಗತಿಗಳು ನಡೆದಿವೆ. ವಸ್ತುವನ್ನು ಕೊಳ್ಳುವ ನೆಲೆಯಲ್ಲಿ ಜೂಜು, ಆಟದ ನೆಲೆಯಲ್ಲಿ ಜೂಜು, ಅತೀ ಹೆಚ್ಚು ಬಡ್ಡಿ ನೀಡುತ್ತೇವೆ ಅನ್ನೋ ಹತ್ತು ಹಲವು ಜುಜೂಗಳು ನಮ್ಮ ಪರಿಸರದಲ್ಲಿ ಚಲನೆಯಲ್ಲಿ ಇವೆ. ಮುದುಕರಿಂದ ಮಕ್ಕಳವರೆಗೂ ಲಿಂಗ–ಬೇಧವಿಲ್ಲದೆ ಇದರಲ್ಲಿ ಮುಳುಗಿ ಕೈಸುಟ್ಟುಕೊಂಡವರು ಇದ್ದರೆ. ನನ್ನ ಪರಿಚಯದ ಹಿರಿಯರು ಊರಿನಲ್ಲಿ ಮನೆ–ಮನೆಗೂ ಹೋಗಿ ಕಡಿಮೆ ಹಣಕ್ಕೆ ಹೆಚ್ಚು ಬಡ್ಡಿಯನ್ನು ನೀಡವ ಸಂಸ್ಥೆಯ ಪರಿಚಯವನ್ನು ಮಾಡಿಕೊಟ್ಟು ನೂರಕ್ಕಿಂತ ಹೆಚ್ಚು ಜನರನ್ನು ಸೇರಿಸಿ ಬಿಟ್ಟರು, ಸ್ವಲ್ಪ ಕಮಿಷನ್ ಹಣವು ಬಂತು ಖುಷಿಗೊಂಡು ಮತ್ತೆ ಹೆಚ್ಚು ಜನರನ್ನು ಸೇರಿಸಲು ಪ್ರಯತ್ನಿಸಿದರು. ಹೀಗೆ ನಡೆದ ಕಂಪನಿಯ ವ್ಯವಹಾರ ಎರಡು ವರ್ಷ ಪೂರ್ಣವಾಗುವ ಮೊದಲೆ ನಾಮ ಹಾಕಿ ನಾಪತ್ತೆಯಾಯಿತು. ಹಣ ಕಟ್ಟಿದವರೆಲ್ಲ ಮನೆಗೆ ಬಂದು ಹಣ ಕೇಳುವುದಕ್ಕೆ ನಿಂತರು ಹಿರಿಯರಿಗೆ ದಿಕ್ಕು ತೋಚಲಿಲ್ಲ ಬೈಸಿಕೊಂಡು, ಅನ್ನಿಸಿಕೊಂಡರು, ಏನೋನು ತನಗೆ ತೋಚಿದ್ದನ್ನು ಹೇಳಿದರೂ ಕೊನೆಗೆ ಒಂದು ದಿನ ಬಾವಿಗೆ ಬಿದ್ದು ಜೀವ ಕಳೆದುಕೊಂಡರು. ಅವರು ಜನರಿಂದ ಸಂಗ್ರಹಿಸಿ ಕಟ್ಟಿದ ಹಣ ಸುಮಾರು ಏಳು ಲಕ್ಷವಾಗಿತ್ತು. ಇಂತಹ ಅದೇಷ್ಟೋ ಘಟನೆಗಳು ನಮ್ಮ ನಡುವೆ ಇವೆ. ಹಣ ಮಾಡುವ ಗೀಳು ಮತ್ತು ಮೋಸದ ಜಾಲವನ್ನು ಹೊಂದಿರುವ ಕಂಪನಿಗಳು ನಮ್ಮ ಬದುಕನ್ನೇ ನಾಶಮಾಡುತ್ತವೆ ಎನ್ನುವ ಅರಿವು ನಮಗೆ ದಕ್ಕಬೇಕಾಗಿದೆ. ಇಂತಹ ಕಂಪನಿಗಳು ಜನಸಾಮಾನ್ಯರ ಸ್ಪರ್ಶಕ್ಕೆ ದಕ್ಕದಂತೆ ನಮ್ಮ ಕಾನೂನುಗಳು ಬಿಗಿಯಾಗಬೇಕು. ಹಣ ಮಾಡುವ ತಂತ್ರ ಎನ್ನುವುದೇ ಸುಳ್ಳು ಎನ್ನುವ ಅರಿವು ನಮ್ಮಲ್ಲಿ ದಟ್ಟವಾಗಬೇಕಾದ ಅಗತ್ಯತೆ ಉಂಟು. ನಾವು ನಮ್ಮ ಸರಕಾರಗಳು ಈ ಬಗ್ಗೆ ಚಿಂತಿಸುವುದು ಅಗತ್ಯವೆಂದು ತೋರುತ್ತದೆ.

# ಸುಖ ದುಃಖ ಸಹಿಸಿಕೊಳ್ಳಲು ಸುಲಭ ಮಾರ್ಗ

ಪ್ರಾಪಂಚಿಕ ವಿಷಯದಲ್ಲಿ "ನಾನು ಪರಮ ಸುಖಿ" ಅಥವಾ "ನಾನು ಅತೀ ದುಃಖಿತನು" ಎಂದು ಯಾರೂ ಪರಿಭಾವಿಸಬೇಕಿಲ್ಲ. ಸುಖ ದುಃಖಗಳು ಸಮನಾಗಿ ಬರುತ್ತವೆ ಎಂತಲೂ ಅಲ್ಲ. ಸುಖವೆನಿಸಿದಾಗ ಆನಂದ, ಕಷ್ಟವೆನಿಸಿದಾಗ ದುಃಖ ಮನಸ್ಥಾಪಕ್ಕೆ ಒಳಗಾಗುವುದು ಮನುಷ್ಯನ ಸಹಜ ಸ್ವಭಾವ. ಕೆಲವರಿಗೆ ಅವು ಹೆಚ್ಚು , ಕೆಲವರಿಗೆ ಕಡಿಮೆ ಇದ್ದೇ ಇರುತ್ತವೆ. ಆದರೆ ಎರಡನ್ನು ಸಮನಾಗಿ ಸ್ವೀಕರಿಸುವ ಮನೋಭಾವನೆ ಬೆಳೆಸಿಕೊಂಡರೆ, ಮನಸ್ಸಿಗೆ ಹಿತ, ಅಥವಾ ನೋವು ಪರಿಣಾಮ ಬಿರುವುದಿಲ್ಲ.

ಕೇವಲ ಸುಖದ ಹಿಂದೆ ಬಿದ್ದರೆ ಆಸೆಗಳು ಉಲ್ಬಣಗೊಳ್ಳುತ್ತವೆ. ಅವುಗಳನ್ನು ಅರ್ಥೈಸಿಕೊಳ್ಳದೇ ಈಡೇರಿಸಿಕೊಳ್ಳುವಾಗ ಕರ್ಮ ಮಾರ್ಗಗಳು ಬದಲಾಗುತ್ತ ಹೋಗುತ್ತವೆ. ನನ್ನ ಎಲ್ಲಾ ಆಸೆಗಳು ಈಡೇರಲೇಬೇಕು ಎನ್ನುವ ಛಲಕ್ಕೆ ಬೀಳುತ್ತಾನೆ. ಹಾಗೊಮ್ಮೆ ಕೆಲವು ಆಸೆಗಳು ಈಡೇರದಿದ್ದಾಗ ಹತಾಶನಾಗುತ್ತಾನೆ. ಮನದಲ್ಲಿ ನೊಂದು ಕೊಳ್ಳುತ್ತಾನೆ. ಮನಸ್ಸು ಸೀಮಿತವನ್ನು ಕಳೆದುಕೊಳ್ಳುವ ಸಂಭವ ಉಂಟು. ಆಗ ದುಃಖಿತನಾಗುತ್ತಾನೆ. ಅಂದರೆ ತಾನು ಸುಖಿ ಎಂದು ಪರಿಭಾವಿಸಿದರೂ ದುಃಖ ತರಿಸಿಕೊಂಡಂತಾಯಿತು ಅಲ್ಲವೇ? ಪ್ರತಿಯೊಬ್ಬರ ಜೀವನದಲ್ಲಿ ಸುಖ ಇದ್ದೇ ಇರುತ್ತದೆ ಆದರೆ ಅದನ್ನು ಗುರುತಿಸುವ ಗೋಜಿಗೆ ಹೋಗುವುದಿಲ್ಲ.

ಇನ್ನು ದುಃಖ. ಇದು ಕೊಂಚ ಬಿನ್ನ. ಸುಖವನ್ನು ಅಪೇಕ್ಷಿಸಿದಂತೆ ಯಾರೂ ಇದನ್ನು ಅಪೇಕ್ಷಿಸುವುದಿಲ್ಲ ಮತ್ತು ಬಯಸುತ್ತ ಇದರ ಹಿಂದೆ ಬೀಳುವುದೂ ಇಲ್ಲ. ಆದರೂ ಇದು ಎಲ್ಲರ ಜೀವನದಲ್ಲಿ




ಲಕುಮಿಸುತ ಸಾರವಾಡ
ಮೊ: 9449598373

Scan For Digital Colourful
HAMPI TIMES E-paper

ಒಂದಿಲ್ಲ ಒಂದು ಬಗೆಯಲ್ಲಿ ಅಂಟಿಕೊಂಡೇ ಇರುತ್ತದೆ. ಅದೆಂತಹಸತ್ಕರ್ಮನಿಷ್ಟರಿಗೂ ಇದು ಗೊತ್ತಿಲ್ಲದಂತೆ ಆವರಿಸುತ್ತದೆ. ಇಂತಹ ದುಃಖಗಳನ್ನು ಸರಿಯಾಗಿ ಅರಿತುಕೊಳ್ಳದೇ ವೃಥಹಃ ಅಜ್ಞಾನದಿಂದ ಮತ್ತೊಬ್ಬರನ್ನೊ, ದೈವ, ದೇವ, ಸಮಯ ಅಥವಾ ವಿಧಿಯನ್ನೊ ದೂಷಿಸುತ್ತ ಮನುಷ್ಯ ಜೀವನ ಸಾಗಿಸುತ್ತಾನೆ.

ಬದುಕಿನಲ್ಲಿ ಹೀಗೆ ಸುಖ–ದುಃಖಗಳೆರಡರ ಆಗಮನ ನಿರ್ಗ ಮನದ ಪ್ರಕ್ರಿಯೆ ನಡೆಯುತ್ತಲೇ ಇರುತ್ತದೆ. ಇವಾವವೂ ಶಾಶ್ವತ



ಇರುವುದಿಲ್ಲ. ಎಲ್ಲವೂ ಕ್ಷಣಿಕ ಅನಿಸಿಕೆಗಳಾಗಿರುತ್ತವೆ.

ಅನೇಕ ಜನ್ಮಗಳನ್ನು ತಾಳಿದ ನಂತರ ಪಂಚಭೂತಗಳಿಂದ ಸೃಷ್ಟಿಸಲ್ಪಟ್ಟ ಮತ್ತು ಶಾಶ್ವತವಲ್ಲದ ಈ ಸ್ಥೂಲ ಮಾನವ ಶರೀರ ಪ್ರಾಪ್ತವಾಗಿರುತ್ತದೆ ಎಂದು ಶಾಸ್ತ್ರ ಪುರಾಣ ಪ್ರವಚನದಲ್ಲಿ ಕೇಳುತ್ತಿದ್ದೇವೆ. ಜತೆಗೆ ಗುಣಾವಗುಣ ಹಾಗೂ ಪಂಚೇಂದ್ರಿಯಗಳನ್ನು ಕೊಟ್ಟು ಅವುಗಳನ್ನು ಹತೋಟಿಯಲ್ಲಿಡಲು ವಿವೇಕ ಮತ್ತು ಮನಸ್ಸನ್ನು ದಯಪಾಲಿಸಿ ನಿಯಂತ್ರಣ ಅಧಿಕಾರವನ್ನು ಮನುಷ್ಯನಿಗೆ ಬಿಟ್ಟು ಕೊಟ್ಟಿದ್ದಾನೆ. ಈ ಅಧಿಕಾರವನ್ನು ಮನುಜ ಬಳಸುತ್ತಿಲ್ಲ ಕೇವಲ ಸುಖದಾಸೆಗೆ ಬಿದ್ದು ದುಃಖದ ಬಲೆಗೆ ಸಿಲುಕಿ ಭ್ರಾಂತಿತನಾಗುತ್ತಾನೆ. ಶ್ರೀಕೃಷ್ಣನು ಅರ್ಜುನನಿಗೆ ಕುರುಕ್ಷೇತ್ರ ಯುದ್ಧದಲ್ಲಿ ಉಪದೇಶ ಮಾಡುವಾಗ (2/14) ಉಲ್ಲೇಖಿಸಿದ್ದಾನೆ.

**"ಮಾತ್ರಾಸ್ಪರ್ಶಾಸ್ತು ಕೌಂತೇಯ**
**ಶೀತೋಷ್ಣ ಸುಖ ದುಃಖದಾಃ ।**
**ಆಗಮಾಪಾಯಿನೋ**
**ನಿತ್ಯಾಸ್ತಾಂಸ್ತಿತಿಕ್ಷಸ್ವ ಭಾರತ" ॥**

ಸುಖ–ದುಃಖದಂತಹ ಇನ್ನಿತರ ವಿಷಯ ವಸ್ತುಗಳು ಇಂದ್ರೀಯಗಳ ಮೂಲಕ ಬೆರೆತು ಸಂವಹನಿಸಿದಾಗ ಇಂತಹ ವಿಷಯಗಳು ಹುಟ್ಟಿಕೊಳ್ಳುತ್ತವೆ. ಅವೆಲ್ಲವುಗಲು ಕ್ಷಣಿಕವಾಗಿದ್ದರಿಂದ ಅವುಗಳನ್ನು ಸಮತೋಲನದಿಂದ ಸಹಿಸಿಕೊಂಡು ಮುಂದೆ ಸಾಗಬೇಕು. ಅರ್ಥಾತ್ ಸುಖ–ದುಃಖಗಳನ್ನು ಸಮಭಾವದಿಂದ ಸ್ವೀಕರಿಸಬೇಕಾದರೇ ಪಂಚೇಂದ್ರೀಯಗಳನ್ನು ಮನಸ್ಸು ಮತ್ತು ಬುದ್ಧಿಗಳನ್ನು ಉಪಯೋಗಿಸಿ ಹತೋಟಿಯಲ್ಲಿಟ್ಟುಕೊಳ್ಳಬೇಕು.

ಭಗವಂತ ಎಲ್ಲರನ್ನೂ ಭೂಮಿಗೆ ಕಳಿಸುವಾಗ "ಹೋಗಿ ಪ್ರವಾಸ ಮಾಡಿ ಬನ್ನಿ" ಎಂದು ಹೇಳಿ ಕಳಿಸಿರುತ್ತಾನೆ. ಹಾಗೆಯೇ ಎಲ್ಲರಿಗೂ ಅವನು ಪ್ರವಾಸದ ಸಮಯ ಮತ್ತು ಇಳಿಯುವ ನಿಲ್ದಾಣಗಳನ್ನು ನಿಶ್ಚಯಿಸಿ ಕಳಿಸಿರುತ್ತಾನೆ. ಅವರವರ ಸಮಯದ ನಿಲ್ದಾಣ ಬಂದಾಗ ಇಳಿದು ಮತ್ತೆ ಅವನ ಹತ್ತಿರ ಹೋಗಬೇಕು. ಪ್ರವಾಸದುದ್ದಕ್ಕೂ ನಾವು ಮಾಡಿದ ಕರ್ಮಕ್ಕನುಸಾರವಾಗಿ ಫಲ ಪ್ರಾಪ್ತಿಸುತ್ತಾನೆ. ಅಂತೆಯೇ ಈ ಜೀವನ ಪ್ರವಾಸದ ಉದ್ದೇಶ ಅರಿತುಕೊಂಡು ಅವನು ಕರುಣಿಸಿದ ವಿವೇಕ ಮತ್ತು ಮನಸ್ಸಿನ ಸಹಾಯದಿಂದ ಪಂಚೇಂದ್ರಿಯಗಳ ಸಮತೋಲನ ಕಾಯ್ದುಕೊಂಡು ಸತ್ಕರ್ಮಗಳೊಂದಿಗೆ ಪ್ರವಾಸಿಸುತ್ತ, ಅಂದರೆ ಸುಖವೆಂದು ಭ್ರಮಿಸಿದಾಗ ಅಹಂಕಾರಕ್ಕೆ ಒಳಗಾಗದೇ, ದುಃಖ ಬಂದಾಗ ಕುಗ್ಗದೇ ಸುಖ–ದುಃಖಗಳೆರಡನ್ನೂ ಸಮಭಾವ ದಿಂದ ಸ್ವೀಕರಿಸಿ, ಕ್ರಮಿಸಿದರೆ ಮೋಕ್ಷವೆಂಬ ಪ್ರವಾಸದ ಫಲ ಭಗವಂತನಿಂದ ದೊರೆಯುತ್ತದೆ.

ಪ್ರಸ್ತುತ ಲೌಕಿಕದಲ್ಲಿ ಈ ರೀತಿ ಬದುಕಲು ಸಾಧ್ಯವೆ? ಎಂಬ ಪ್ರಶ್ನೆ ತಲೆದೋರುವುದು ಸಹಜ. ಹೌದು ಸಾಧ್ಯವಿದೆ. ಮನುಷ್ಯನಿಗೆ ಅನಾರೋಗ್ಯವಾದಾಗ ವೈದ್ಯರ ಬಳಿಗೆ ಹೋಗಿ ಚಿಕಿತ್ಸೆ ಪಡೆಯುತ್ತಾರಲ್ಲವೆ? ಹಾಗೆಯೇ ಈ ಸುಖ– ದುಃಖಗಳ ಸರಮಾಲೆ ಕೊರಳಿಗೆ ಬಿದ್ದರೂ, ಕೊರಳು ಭಾರವಾಗದಂತೆ ಅಂದರೆ ಅವು ನಮ್ಮನ್ನು ಆವರಿಸಿದರೂ ಅದರ ಪರಿಣಾಮ ಬದುಕಿಗೆ ಭಾರವೆನಿಸದಂತೆ ಭಯಮುಕ್ತರಾಗಿ ಬದುಕು ಸಾಗಿಸಲು ಮದ್ದಿನಂತಹ ಮಾರ್ಗಗಳಿವೆ.

ಮೊದಲು ದೈವತ್ವ ಮನೋಭಾವನೆಯ ನಂಬಿಕೆಯ ಮನಸ್ಸು ಸಿದ್ಧಪಡಿಸಿಕೊಳ್ಳಬೇಕು. ಸದಾಕಾಲ ಧನಾತ್ಮಕ ಚಿಂತನೆಯಲ್ಲಿರುವುದು. ಸತ್ಕರ್ಮದ ಕಾಯಕದಲ್ಲಿ ತೊಡಗಬೇಕು. ಶಾರೀರಿಕವಾಗಿ ನಿತ್ಯ ಪ್ರಾಣಾಯಾಮ, ಯೋಗ ಧ್ಯಾನದ ರೂಢಿ ಮಾಡಿಕೊಳ್ಳಬೇಕು. ದೃಢ ನಂಬಿಕೆ ಭಕ್ತಿಯಿಂದ ಇಷ್ಟಾರ್ಥ ಗುರು ದೇವರ ಪೂಜೆಯೊಂದಿಗೆ ಸತ್ಸಂಗದಲಿ ಭಾಗವಹಿಸಬೇಕು. ಇವೆಲ್ಲವನ್ನೂ ನಿತ್ಯ ಕರ್ಮವನ್ನಾಗಿ ಮೈಗೂಡಿಸಿಕೊಂಡಾಗ ಜ್ಞಾನ, ಭಕ್ತಿ ಮತ್ತು ವೈರಾಗ್ಯದ ಅರಿವು ಮೂಡುತ್ತದೆ. ಇದುವೇ ಮೋಕ್ಷ ಮಾರ್ಗದ ನಿತ್ಯ ಸತ್ಯ.

ನಂಬಿಕೆ ದೃಢ ಸಂಕಲ್ಪಕ್ಕೆ, ಧನಾತ್ಮಕ ಚಿಂತನೆಯು ಉತ್ತಮ ಆಲೋಚನೆಗೆ ಕಾರಣವಾಗುತ್ತದೆ. ಯೋಗ ವ್ಯಾಯಾಮ ಭೌತಿಕ ಶರೀರವನ್ನು ಕಾಪಾಡಿದರೆ ಧ್ಯಾನ ಪ್ರಣಾಯಾಮವು ಮನಃಶಾಂತಿ ಬುದ್ಧಿಯನ್ನು ಚುರುಕುಗೊಳಿಸುತ್ತದೆ. ಸತ್ಕರ್ಮವು ಸಮಾಧಾನ ತರುತ್ತದೆ. ಗುರು–ದೇವರ ಪೂಜೆ ದೈವತ್ವದ ಮನೋಭಾವ ಹೆಚ್ಚಿಸುತ್ತದೆ. ಈ ಎಲ್ಲ ನಿತ್ಯ ಚಟುವಟಿಕೆಯಿಂದ ಜ್ಞಾನ ಭಕ್ತಿ ವೈರಾಗ್ಯದರಿವಿನ ಅನುಭವವಾಗುತ್ತದೆ.

ಇಷ್ಟೆಲ್ಲವೂ ಕೆಲ ಗಂಟೆ, ಕೆಲ ದಿನಗಳಲ್ಲಿ ಬದಲಾಗುವದಿಲ್ಲ. ನಿತ್ಯ ಅಭ್ಯಾಸದ ಕ್ರಮದಿಂದ ಅವರವರ ಪ್ರಯತ್ನಕ್ಕೆ ತಕ್ಕಂತೆ ಅವರಿಗೆ ಅನುಭವ ಆಗಲು ಶುರು ಆಗುತ್ತದೆ. ಆಗ ಅದೆಷ್ಟೇ ಸುಖ–ದುಃಖಗಳು ಆವರಿಸಿಕೊಂಡರೂ ಅವೆಲ್ಲವೂ ಕ್ಷಣಿಕವೆನಿಸಿ

ಬದುಕು ಭಾರವಾಗದೇ ಆತ್ಮದ ಅರಿವಿನೆಡೆಗೆ ಪಯಣಿಸುತ್ತ ಆನಂದದ ಅನುಭವ ಪಡೆಯಬಹುದು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಯುಗಾದಿ ಅಂದು ಇಂದು

ಹೆಂಗೆಳೆಯರು
ಮುಂಜಾವಿನೋಳು
ಅಂಗಳದಿ ಸಗಣಿ
ರಾಡಿ ಬಳಿದು ಬಣ್ಣದ
ರಂಗೋಲಿ ಹಾಕಿ
ಬರುವ ಮಂದಿಗೆ ಯುಗಾದಿ
ಶುಭ ಕೋರುತ್ತಿದ್ದರು ಅಂದು

ಮದ್ಯಾಹ್ನದಿ ಎದ್ದು
ಅಂಗಳಯಿಲ್ಲದ ಮನೆಯ
ಮುಂದೆ ಶ್ವಾನವ ಕಟ್ಟಿ
ಬರುವವ ಮಂದಿಯ
ಯುಗಾದಿ ಥ್ರು ಮಾಡಿ
ಕಳಿಸುವರು ಇಂದು

ಅತಿಥಿ ದೇವೋಭವ
ಎಂಬ ಮಾತು ಮನೆ
ಮಂದಿಯ ಮನದಲ್ಲಿತ್ತು
ಅಂದು ಭಕ್ತಿಗಿಂತ ಭಯದ
ಮಾತೇ ಮನೆಯಲ್ಲಾ
ತುಂಬಿದ ಯುಗಾದಿ ಇಂದು

ಮನೆ ಮಂದಿಯೆಲ್ಲಾ
ಹೊಸ ಬಟ್ಟೆ ತೊಟ್ಟು
ನಲಿವ ಕಾಲವಾಗಿತ್ತು ಅಂದು
ದಿನಕ್ಕೊಂದು ಹೊಸ ಮಾತು
ತೊಟ್ಟು ನಲಿವ ಯುಗಾದಿ
ಕಾಲವಾಗಿದೆ ಇಂದು

ಬೇವು ಬೆಲ್ಲದ ಅರ್ಥವ
ತಿಳಿಸಿ ಹಿರಿಯರ ಆಶೀರ್ವಾದ
ಪಡೆದು ಚಂದ್ರದರುಶನ
ಮಾಡುವ ರೂಢಿಯ
ಯುಗಾದಿ ಅಂದು

ಬೇವು ಬೆಲ್ಲ ಮುಟ್ಟದ
ಮಂದಿ ಸಿಹಿ ಕಹಿಗೊಂದು
ಗುಳಿಗೆ ತಗೆದುಕೊಂಡು
ಹಬ್ಬದ ಸವಿಯ ಸವಿಯದ
ಯುಗಾದಿ ಇಂದು

GR ಬಸವರಾಜೇಶ್ವರಿ

# ಅಂಧತೆಯನ್ನು ಮೆಟ್ಟಿ ನಿಂತ... ಶೋಭಾ ಮಲ್ಲಾಡದ್

■ ವೀಣಾ ಹೇಮಂತ್ ಗೌಡ ಪಾಟೀಲ್ ಮುಂಡರಗಿ



ಇರುವುದೆಲ್ಲವನ್ನು ಅನುಭವಿಸದೆ, ಇರದೆ ಇರುವುದರ ಕುರಿತು ಹಲುಬುವ, ತಾನು ಬಯಸಿದ್ದು ತನಗೆ ಬೇಕೆ ಬೇಕೆಂದು ಹಪಹಪಿಸುವ ಜನರ ನಡುವೆ ಸ ಕ ಲಾ ಂ ಗ ಗ ಳಿ ದ್ ದೂ ವಿಕಲಾಂಗರಂತೆ ಬದುಕುವ ನೂರಾರು, ಸಾವಿರಾರು ಜನರ ನಡುವೆ, ತನ್ನವರು ಎಂಬ ಯಾರೂ ಇಲ್ಲದೆ ಇದ್ದರೂ ದೈಹಿಕವಾಗಿ ಗಟ್ಟಿಮುಟ್ಟಾಗಿದ್ದರೂ ಕಣ್ಣು ಕಾಣದ ಅಂಧಳಾಗಿ ತನ್ನ ವೈಯುಕ್ತಿಕ ಕೆಲಸಗಳನ್ನು ತಾನೇ ನಿರ್ವಹಿಸುತ್ತಾ ಬದುಕನ್ನು ಸಾಗಿಸುತ್ತಿರುವ ಮಹಿಳೆಯೇ ನಮ್ಮ ಇಂದಿನ ಕಥಾ ನಾಯಕಿ ಶೋಭಾ ಮಲ್ಲಾಡದ್.

ಹುಟ್ಟಿದ ಹತ್ತು ವರ್ಷಗಳವರೆಗೆ ಸಾಮಾನ್ಯ ಬಾಲಕಿಯರಂತೆ ಬೆಳೆದ ಆಕೆಗೆ ಹತ್ತನೇ ವಯಸ್ಸಿನ ಸುಮಾರಿಗೆ ಆಕೆಯ ಪಾಲಕರ ಸಂಬಂಧಿಗಳ ದ್ವೇಷಕ್ಕೆ ಬಲಿಯಾಗಿ ಕಣ್ಣುಗಳನ್ನು ಕಳೆದುಕೊಂಡಳು. ಕೊಬ್ಬರಿ ಎಣ್ಣೆಯಲ್ಲಿ ಯಾವುದೋ ಎಲೆಯ ರಸವನ್ನು ಹಾಕಿ ತಲೆಯ ಕೂದಲಿಗೆ ಹಚ್ಚಿದ ಪರಿಣಾಮವಾಗಿ ಆ ರಸ ಕಣ್ಣೊಳಗೆ ಹೋಗಿ ಆಕೆಯ ಕಣ್ಣುಗಳ ದೃಷ್ಟಿ ಇಂಗಿ ಹೋಯಿತು ಎಂದು ಆಕೆ ಹೇಳುತ್ತಾಳೆ.

ಇಷ್ಟರಲ್ಲೇ ಆಕೆಯ ಮದುವೆಯನ್ನು ಪಕ್ಕದ ಪಟ್ಟಣದ ಯುವಕನೊಂದಿಗೆ ಮಾಡಲಾಗಿತ್ತು. 12ನೇ ವರ್ಷಕ್ಕೆ ಋತುಮತಿಯಾದ ಆಕೆಯನ್ನು ಮುಂದಿನ ಶುಭ ದಿನದಲ್ಲಿ ಗಂಡನ ಮನೆಗೆ ಕಳುಹಿಸಿಕೊಡಲಾಯಿತು.

ಈಗಾಗಲೇ ಎರಡು ಕಣ್ಣುಗಳನ್ನು ಕಳೆದುಕೊಂಡು ತನ್ನ ಪಾಡಿಗೆ ಮನೆಯ ಎಲ್ಲಾ ಕೆಲಸ ಕಾರ್ಯಗಳನ್ನು ಆಕೆ ನಿರ್ವಹಿಸಿಕೊಂಡು ಹೋಗುತ್ತಿದ್ದಳಾದರೂ ಆಕೆಯನ್ನು ಸೊಸೆ ಎಂದು ಒಪ್ಪಿಕೊಳ್ಳಲು ಆಕೆಯ ಅತ್ತೆ ಮಾವರಾಗಲಿ, ಹೆಂಡತಿ ಎಂದು ಒಪ್ಪಿಕೊಳ್ಳಲು ಗಂಡನಾಗಲಿ ತಯಾರಾಗಲಿಲ್ಲ. ಮುಂದೆ ಒಂದೆರಡು ವಾರಗಳಲ್ಲಿ ಆಕೆಯನ್ನು ತವರಿಗೆ ವಾಪಸ್ಸು ಕಳುಹಿಸಿಬಿಟ್ಟರು ಆಕೆಯ ಅತ್ತೆ ಮಾವ.

ತಮ್ಮ ಒಬ್ಬಳೇ ಮಗಳ ಬಾಳು ಹೀಗೆ ಹಾಳಾದುದನ್ನು ಕಂಡು ವ್ಯಸನಕ್ಕೆ ಈಡಾದ ತಂದೆ ತಾಯಿಗಳು ಕೊರಗಿ ಮುಂದಿನ ಕೆಲವೇ ವರ್ಷಗಳಲ್ಲಿ ಮರಣ ಹೊಂದಿದರು. ನಂತರ ಹಲವಾರು ವರ್ಷಗಳ ಕಾಲ ಆಕೆಯನ್ನು ತನ್ನ ಮನೆಯಲ್ಲಿಯೇ ಇಟ್ಟುಕೊಂಡು ಜೋಪಾನ ಮಾಡಿದ್ದು ಆಕೆಯ ದೊಡ್ಡಮ್ಮ. ಕೆಲವು ವರ್ಷಗಳ ಹಿಂದೆ ಆಕೆಯ ದೊಡ್ಡಮ್ಮನೂ ತೀರಿ ಹೋದಾಗ ಅಕ್ಷರಶಃ ಒಂಟಿಯಾದಳಾಕೆ.

ಅನಿವಾರ್ಯವಾಗಿ ಆಕೆಯ ಸೋದರ ಮಾವ ಮತ್ತು ಆತನ ಪತ್ನಿ ಆಕೆಯನ್ನು ಜೋಪಾನ ಮಾಡಿದರಾದರೂ ಎಲ್ಲಿಯವರೆಗೆ ಹೀಗೆ ಆಕೆಯನ್ನು ನೋಡಿಕೊಳ್ಳುವುದು ಎಂದು ಬೇಸತ್ತ ಸೋದರಮಾವನ ಪತ್ನಿ ತನ್ನ ಪತಿಯನ್ನು ಕರೆದುಕೊಂಡು ತನ್ನ ತವರೂರಿಗೆ ವಲಸೆ ಹೋದಳು.... ಇದೀಗ ಮೊತ್ತ ಮೊದಲ ಬಾರಿಗೆ ನೀರಿನಿಂದ ಹೊರ ಬಿದ್ದ ಮೀನಿನಂತಾದಳು ಆಕೆ.

ಆದರೆ ಬದುಕಿನ ಬಂಡಿ ಸಾಗಲೇಬೇಕಲ್ಲ!

ಸೋದರಮಾವ ಬಿಟ್ಟು ಹೋದ ಪುಟ್ಟ ಮನೆಯಲ್ಲಿ ತಾನೊಬ್ಬಳೆ ಇದ್ದು ಇಡೀ ಮನೆಯ ಕಸ ಗುಡಿಸುವ, ಸುಣ್ಣ ಸಾರಿಸುವ, ಪಾತ್ರೆ ತಿಕ್ಕುವ, ಬಟ್ಟೆ ಒಗೆಯುವ

ಅಡುಗೆ ಮಾಡಿಕೊಳ್ಳುವ ಆಕೆ ರೊಟ್ಟಿ ತಟ್ಟುವುದನ್ನು ಕೂಡ ಕಲಿತಿದ್ದಳು. ತನ್ನ ಮನೆ ಮತ್ತು ಹಿತ್ತಲುಗಳಿಗೆ ಸರಾಗವಾಗಿ ಒಬ್ಬಳೇ ಓಡಾಡುತ್ತಿದ್ದ ಆಕೆಗೆ ಹೊಲಕ್ಕೆ ಹೋಗಲು ಮಾತ್ರ ಯಾರಾದರೂ ಜೊತೆ ಬೇಕಾಗುತ್ತಿತ್ತು. ಒಂದೊಮ್ಮೆ ಹೊಲಕ್ಕೆ ಕರೆದೊಯ್ದು ಆಕೆಯನ್ನು ಬಿಟ್ಟರೆ ಉಳಿದೆಲ್ಲ ಕೂಲಿ ಹೆಣ್ಣುಮಕ್ಕಳಂತೆ ಆಕೆಯೂ ಕೂಡ ಬೀಜ ಬಿತ್ತುವ, ಗದ್ದೆಯಲ್ಲಿ ಸಸಿ ನೆಡುವ, ಕಳೆ ಕೀಳುವ, ರಾಶಿ ಮಾಡುವ ಎಲ್ಲ ರೈತಾಪಿ ಕೆಲಸಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಕೆಲಸ ನಿರ್ವಹಿಸುವ ಶೋಭಾ ಆರ್ಥಿಕವಾಗಿ ಪರಾವಲಂಬಿಯಾಗಿಲ್ಲ.

ಕೂಲಿ ಮಾಡಿ ತನ್ನ ಬದುಕಿನ ಬಂಡಿಯನ್ನು ಎಳೆಯುತ್ತಿರುವ ಶೋಭಾಗೆ ಆಕೆಯ ಊರಿನ ಸಮಸ್ತ ಜನರ ಸಹಾಯ ಸಹಕಾರಗಳು ದೊರೆಯುತ್ತಿದೆ ಎಂಬುದು ಸಮಾಧಾನದ ವಿಷಯ.

ಪ್ರಸ್ತುತ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಹೆಸರೂರು ಗ್ರಾಮದಲ್ಲಿ ವಾಸವಾಗಿರುವ ಶೋಭಾ ಮಲ್ಲಾಡದ ಬದುಕು ಅನುಕರಣೀಯವಾದುದು.

ಇನ್ನು ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಇಂತಹ ನೂರಾರು ಹೆಣ್ಣು ಮಕ್ಕಳು ದೈಹಿಕ ಅಂಗಗಳ ನ್ಯೂನತೆಯನ್ನು ಹೊಂದಿದ್ದರೂ ಕೂಡ ಮಾನಸಿಕವಾಗಿ ಬಲಿಷ್ಠರು ಎಂಬುದಕ್ಕೆ ಸಾಕ್ಷಿಯಾಗಿ ಶೋಭಾ ಮಲ್ಲಾಡದ ನಮ್ಮ ಮುಂದೆ ಇದ್ದಾರೆ.

ಇತ್ತೀಚೆಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿದ ಮುಂಡರಗಿ ತಾಲೂಕ ಕದಳಿ ಮಹಿಳಾ ವೇದಿಕೆ ಮತ್ತು ವೀರಭದ್ರೇಶ್ವರ ಮಹಿಳಾ ಘಟಕಗಳು ಶೋಭಾ ಮಲ್ಲಾಡದವರನ್ನು

ಕರೆಸಿ ಸನ್ಮಾನಿಸಿದ್ದು ಆಕೆಗೆ ಸಂತಸವನ್ನು ಉಂಟುಮಾಡಿದೆ. ಆಕೆಯನ್ನು ಮಾತನಾಡಿಸಿದಾಗ ತನ್ನೆಲ್ಲ ಕಥೆಯನ್ನು ಹೇಳಿಕೊಂಡ ಆಕೆ ತನ್ನವರೆನ್ನುವ ಯಾರೂ ಇಲ್ಲ ಎಂಬ ನೋವನ್ನು ತೋಡಿಕೊಂಡಳಾದರೂ ತನ್ನೂರಿನ ಜನರ ಪ್ರೀತಿ ಸಹಕಾರಗಳನ್ನು ಧನ್ಯತೆಯಿಂದ ನೆನೆದಳು.. ಆಕೆಯ ಜೀವನ ಪ್ರೀತಿ ಅಸದಳ.

ಕೈಕಾಲು ಗಟ್ಟಿ ಇರುವವರೆಗೂ ನಾನು ಬದುಕಬಲ್ಲೆ ಆದರೆ ಪರಾಧೀನಳಾಗುವ ಹೊತ್ತಿಗೆ ದೇವರು ನನ್ನನ್ನು ಕರೆದುಕೊಳ್ಳಲಿ ಎಂದು ಆಶಿಸುವ ಆಕೆ ಸಣ್ಣಪುಟ್ಟದಕ್ಕೂ ದೇವರನ್ನು, ಸಮಾಜವನ್ನು, ಹೆತ್ತವರನ್ನು ಮತ್ತು ವ್ಯವಸ್ಥೆಯನ್ನು ದೂಷಿಸುವ ಇಂದಿನ ಸಾಮಾಜಿಕ ಮನಸ್ಥಿತಿಯ ಜನರ ನಡುವೆ ಅಂಧೆಯಾಗಿಯೂ ಬದುಕನ್ನು ಅದು ಇರುವ ರೀತಿಯಲ್ಲಿಯೇ ಸ್ವೀಕರಿಸಿ ಇಂದಿನ ಯುವ ಜನಾಂಗಕ್ಕೆ ಮಾರ್ಗದರ್ಶಿಯಾಗಿದ್ದಾಳೆ.

# ಅಹವಾಲು ಸ್ವೀಕಾರ, ಜನ ಸಂಪರ್ಕ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆ ಏರ್ಪಡಿಸಲಾಗಿದೆ ಎಂದು ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕರಾದ ಸುರೇಶ್.ಎಂ.ಭಾವಿಮನಿ ಮತ್ತು ನಾಗರೆಡ್ಡಿ ಇವರ ನೇತೃತ್ವದಲ್ಲಿ ಕುರುಗೋಡು, ಸಂಡೂರು, ಸಿರುಗುಪ್ಪ ಮತ್ತು ಕಂಪ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ನಡೆಯಲಿದೆ.

*ಅಹವಾಲು ಸ್ವೀಕರಿಸುವ ದಿನ ಮತ್ತು ಸ್ಥಳ:*

ಏ.09 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಕುರುಗೋಡು ತಹಶೀಲ್ದಾರರ ಕಚೇರಿ ಸಭಾಂಗಣ. ಏ.17 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಸಂಡೂರು ತಹಶೀಲ್ದಾರರ ಕಚೇರಿ ಸಭಾಂಗಣ. ಏ.23 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಸಿರುಗುಪ್ಪ ಸಿಡಿಪಿಓ ಕಚೇರಿ ಸಭಾಂಗಣ ಮತ್ತು ಏ.24 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಕಂಪ್ಲಿ ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ.01 ಮತ್ತು 02 ಗಳನ್ನು ಸಹ ನೀಡಲಾಗುವುದು. ಕುಂದು ಕೊರತೆಗಳಿರುವ ಸಾರ್ವಜನಿಕರು ದೂರುಗಳಿದ್ದಲ್ಲಿ ನಿಗದಿಪಡಿಸಿದ ದಿನದಂದು ಅರ್ಜಿ ನಮೂನೆಯಲ್ಲಿ ಅಹವಾಲು ನೀಡಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ.02 ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–2 ವ್ಯಾಪ್ತಿಯಲ್ಲಿ ವಿದ್ಯುತ್ ಪರಿವರ್ತಕ ಕಾರ್ಯ ಕೈಗೊಳ್ಳುತ್ತಿರುವುರಿಂದ ಏ.02 ರಂದು ಬೆಳಿಗ್ಗೆ 9.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಎಫ್–7 ವ್ಯಾಪ್ತಿಯ ರಾಘವ ಕಲಾ ಮಂದಿರ, ಅನಂತಪುರ ರಸ್ತೆ, ವಡ್ಡರ ಬಂಡೆ, ಅಗಡಿ ಮಾರೆಪ್ಪ ಕಾಂಪೌಂಡ್, ರೂಪನಗುಡಿ ರಸ್ತೆ, ಮುಬರಕ್ ಟಾಕೀಸ್, ಬಾಲಾಜಿರಾವ್ ರಸ್ತೆ, ಕೆ.ಸಿ.ರೋಡ್, ಮೀನಾಕ್ಷಿ ಸರ್ಕಲ್, ಬೆಂಗಳೂರು ರಸ್ತೆ, ದುಗ್ಗಪ್ಪ ಬೀದಿ, ರೆಡ್ಡಿ ಬೀದಿ, ಅಲ್ಲಂ ಬೀದಿ, ಮುಲ್ಲಂಗಿ ಸಂಜೀವಪ್ಪ ಬೀದಿ, ರೂಪನಗುಡಿ ನರಪ್ಪ ಬೀದಿ, ತಾಯಮ್ಮ ಕಟ್ಟೆ ಸೇರಿದಂತೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶ್ರೀ ಸದ್ಗುರು ಯರ್ರಿತಾತನವರ ವಾರ್ಷಿಕ ಜಾತ್ರೆ, ರಥೋತ್ಸವ ನಿಷೇಧಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ತಾಲ್ಲೂಕಿನ ಕೊಳಗಲ್ ಗ್ರಾಮದಲ್ಲಿ ಏ.04 ರಂದು ನಡೆಯುವ ಶ್ರೀ ಸದ್ಗುರು ಯರ್ರಿತಾತನವರ ವಾರ್ಷಿಕ ಜಾತ್ರೆ/ರಥೋತ್ಸವವನ್ನು ಕರ್ನಾಟಕ ಪೊಲೀಸ್ ಕಾಯ್ದೆ 1963 ರ ಕಲಂ 35 ರಡಿ ಪ್ರದತ್ತವಾದ ಅಧಿಕಾರದ ಮೇರೆಗೆ ನಿಷೇಧಿಸಿ ಜಿಲ್ಲಾ ದಂಡಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಕೊಳಗಲ್ಲು ಗ್ರಾಮದಲ್ಲಿ ಶ್ರೀ ಸದ್ಗುರು ಯರ್ರಿತಾತನವರ ದೇವಸ್ಥಾನದ ಆಸ್ತಿ–ಪಾಸ್ತಿ ಮತ್ತು ಆಡಳಿತ ವಿಚಾರವಾಗಿ ಗಲಾಟೆಗಳಾಗಿ ವಿವಾದ ಇರುತ್ತದೆ ಹಾಗೂ 2024 ರ ಫೆ.24 ರಂದು ಬೆಳಿಗ್ಗೆ 04 ಗಂಟೆಗೆ ಶ್ರೀ ಸದ್ಗುರು ಯರ್ರಿತಾತನವರ ಮಠದ ಆವರಣದಲ್ಲಿ ಹೊಸದಾಗಿ ಕಟ್ಟಿರುವ ಎರಿಯಪ್ಪ ತಾತ ಗುಡಿಯಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಿರುವ ವಿಚಾರವಾಗಿ ಧಾರವಾಡ ಉಚ್ಛ ನ್ಯಾಯಾಲಯ ಪೀಠವು ಪ್ರತಿಷ್ಠಾಪಿಸಿದ ಮೂರ್ತಿಯನ್ನು ತೆರವುಗೊಳಿಸಬೇಕು ಎಂದು ಆದೇಶಿಸಿರುತ್ತಾರೆ.

ಉಚ್ಛ ನ್ಯಾಯಾಲಯದ ಆದೇಶದ ಮೇರೆಗೆ ಮೂರ್ತಿ ತೆರವುಗೊಳಿಸಿರುವುದರಿಂದ ಕೊಳಗಲ್ ಗ್ರಾಮದಲ್ಲಿ ಪರ–ವಿರೋಧ ಇರುವ ವಿವಿಧ ಜಾತಿ ಜನಾಂಗದವರ ಮಧ್ಯೆ ವೈಷಮ್ಯ ಉಂಟಾಗಿ 2024 ರ ಏ.07 ರಂದು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿ ಹಲ್ಲೆ ಮಾಡಿದ್ದು ಮತ್ತು ದೇವಸ್ಥಾನದ ಆಸ್ತಿ–ಪಾಸ್ತಿ ಹಾಗೂ ಆಡಳಿತದ ವಿಚಾರವಾಗಿ ಗಲಾಟೆಗಳಾಗಿ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ. ಶ್ರೀ ಸದ್ಗುರು ಯರ್ರಿತಾತನವರ ವಾರ್ಷಿಕ ಜಾತ್ರೆ/ರಥೋತ್ಸವವು ಆಚರಣೆ ಮಾಡಿದಲ್ಲಿ ಸಾರ್ವಜನಿಕರಿಗೆ ಪ್ರಾಣ ಹಾನಿ, ಆಸ್ತಿ–ಪಾಸ್ತಿ ನಷ್ಟ ಉಂಟಾಗಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವ ಸಾಧ್ಯತೆ ಇರುವುದರಿಂದ ಕೊಳಗಲ್ ಗ್ರಾಮದಲ್ಲಿ ಇದೇ ಏ.04 ರಂದು ನಡೆಯುವ ಶ್ರೀ ಸದ್ಗುರು ಯರ್ರಿತಾತನವರ ವಾರ್ಷಿಕ ಜಾತ್ರೆ/ರಥೋತ್ಸವವನ್ನು ಆಚರಣೆ ಮಾಡದಂತೆ ಕರ್ನಾಟಕ ಪೊಲೀಸ್ ಕಾಯ್ದೆ 1963 ರ ಕಲಂ 35 ರಂತೆ ನಿಷೇಧಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಅದರಂತೆ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಮಾ.28 ರಂದು ನಡೆದ ಸಭೆಯ ನಡವಳಿಗಳಲ್ಲಿ ಜಾತ್ರೆ ಆಚರಿಸಲು ಅನುಮತಿ ನೀಡಿದಲ್ಲಿ ಗ್ರಾಮದಲ್ಲಿ ಅಹಿತಕರ ಘಟನೆಗಳು ನಡೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಅಧೀಕ್ಷಕರು ಸಹ ಕೊಳಗಲ್ ಗ್ರಾಮದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಾತ್ರೆ/ರಥೋತ್ಸವ ಆಚರಣೆ ಮಾಡದಂತೆ ನಿಷೇಧಿಸುವುದು ಸೂಕ್ತ ಎಂದು ತಿಳಿಸಿರುತ್ತಾರೆ.

ಹಾಗಾಗಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಕೊಳಗಲ್ ಗ್ರಾಮದಲ್ಲಿ ಏ.04 ರಂದು ನಡೆಯುವ ಶ್ರೀ ಸದ್ಗುರು ಯರ್ರಿತಾತನವರ ವಾರ್ಷಿಕ ಜಾತ್ರೆ/ರಥೋತ್ಸವವನ್ನು ನಿಷೇಧಿಸಿ ಆದೇಶಿಸಿದ್ದು, ಜಿಲ್ಲಾ ಪೊಲೀಸ್ ಅಧೀಕ್ಷಕರು ಈ ಆದೇಶವನ್ನು ಪರಿಣಾಮಕಾರಿಯಾಗಿ ಜಾರಿಗೆ ಬರುವಂತೆ ಕ್ರಮ ಕೈಗೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

# ಗರ್ಭಿಣಿಯರು ಮಧ್ಯಾಹ್ನ ಹೊರಗಡೆ ಓಡಾಡದಿರಿ

ಮೊದಲ ಪುಟದಿಂದ

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ 02 ಬೆಡ್ ಕಾಯ್ದಿರಿಸಲಾಗಿದೆ ಎಂದು ಡಿಹೆಚ್ಓ ಅವರು ಹೇಳಿದರು.

ಜಿಲ್ಲೆಯ ಗ್ರಾಮ ಮಟ್ಟದಲ್ಲಿರುವ ಆಯುಷ್ಮಾನ್ ಆರೋಗ್ಯ ಮಂದಿರ ಸೇರಿದಂತೆ ಎಲ್ಲ ಆರೋಗ್ಯ ಕೇಂದ್ರಗಲ್ಲಿ ಬಿಸಿಲಿನ ಶಾಖಾಘಾತದ ಚಿಕಿತ್ಸೆಗೆ ಸಂಬಂಧಸಿದಂತೆ ಅಗತ್ಯ ತುರ್ತು ಔಷಧಿಗಳನ್ನು ಕೊರತೆಯಾಗದಂತೆ ದಾಸ್ತಾನು ಇರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ತಾರನಾಥ ಆರ್ಯುವೇದ ಕಾಲೇಜಿನ ಪ್ರಾಂಶುಪಾಲರಾದ ಡಾ.ಶ್ರೀಧರ್, ಆಯುಷ್ ಪ್ರಾಧ್ಯಾಪಕರಾದ ಡಾ.ರಾಜಶೇಖರ್ ಗಾಣಿಗೇರ್, ಡಾ.ಫಣೀಂದ್ರ, ಡಾ.ಕಲ್ಯಾಣಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕಚೇರಿ ಅಧೀಕ್ಷಕ ಬಸವರಾಜ್, ಆರೋಗ್ಯ ನಿರೀಕ್ಷಣಾಧಿಕಾರಿ ಕೆ.ವಿರೇಶ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಶರಣಮ್ಮ, ಸಿದ್ದಮ್ಮ, ಫಾರ್ಮಸಿಸ್ಟ್ ಕ್ರಿಷ್ಣಮೂರ್ತಿ, ಆಶಾ ಕಾರ್ಯಕರ್ತೆ ರಾಧ ಸೇರಿದಂತೆ ತಾಯಂ ದಿರು ಹಾಗೂ ಸಾರ್ವಜನಿಕರು ಇದ್ದರು.

# ಕನ್ನಡದ ಜ್ಞಾನ ಅನಾವರಣಗೊಳ್ಳಲಿ

ಮೊದಲ ಪುಟದಿಂದ

ಎಂದು ಅತ್ಯಂತ ಕಡಿಮೆ ಬೆಲೆಗೆ ಪ್ರಸಾರಂಗ ಪುಸ್ತಕಗಳನ್ನು ಪ್ರಕಟಿಸುತ್ತದೆ ಎಂದು ಹೇಳಿದರು.

ಕನ್ನಡ ವಿಶ್ವವಿದ್ಯಾಲಯದ ಕುಲಸಚಿವ ಡಾ.ವಿಜಯ್ ಪೂಣ್ಣಚ್ಚ ತಂಬಂಡವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಂಶೋಧನೆ ಮತ್ತು ಪ್ರಕಟಣೆ ಎನ್ನುವುದು ವಿಶ್ವವಿದ್ಯಾಲಯದ ಜೀವಾಳ. ಈ ಬಾರಿ ಹೆಚ್ಚು ಪುಸ್ತಕಗಳು ಮಾರಾಟ ವಾಗಿವೆ. ನಾಡಿನ ಎಲ್ಲೆಡೆ ವಿಶ್ವವಿದ್ಯಾಲಯದ ಜ್ಞಾನವನ್ನು ತಲುಪಿಸುವ ಕೆಲಸ ನಡೆಯುತ್ತಿದೆ. ಪ್ರಸಾರಾಂಗವು ಸಾಮಾಜಿಕ, ರಾಜಕೀಯ, ಸಾಹಿತ್ಯ, ಚರಿತ್ರೆ, ವಿಜ್ಞಾನ ಹೀಗೆ ಎಲ್ಲ ಪ್ರಕಾರದ ಪುಸ್ತಕಗಳನ್ನು ಪ್ರಕಟಿಸಿಕೊಂಡು ಬಂದಿದೆ. ಪ್ರಸಾರಾಂಗದ ಹೊಸ ಕಟ್ಟಡ ನಿರ್ಮಾಣ ಶೇ.80 ರಷ್ಟು ಪೂರ್ಣಗೊಂಡಿದ್ದು, ಶೇ.20ರಷ್ಟು ಬಾಕಿ ಇದೆ. ಕೆಕೆಆರ್‌ಡಿಬಿ ಯಿಂದ ಅನುದಾನ ಬಿಡುಗಡೆಯಾದರೆ ಉಳಿದ ಕಾರ್ಯವನ್ನು ಪೂರ್ಣಗೊಳಿಸುತ್ತೇವೆ ಎಂದರು.

ಈ ಕಾರ್ಯಕ್ರಮದಲ್ಲಿ ಸಾಹಿತಿಗಳು, ಪುಸ್ತಕ ಪ್ರಕಟಿಸಿದ ಲೇಖಕರು, ವಿವಿಧ ನಿಕಾಯಗಳ ಡೀನರು, ವಿವಿಧ ವಿಭಾಗಗಳ ಪ್ರಾಧ್ಯಾಪಕರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು, ಸಂಶೋಧನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಂಗೀತ ಮತ್ತು ನೃತ್ಯ ವಿಭಾಗದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಕಾರ್ಯಕ್ರಮದಲ್ಲಿ ಭಾಗಿಯಾದ ವರಿಗೆ ಇಂಪಾದ ಸಂಗೀತವನ್ನು ಉಣ ಬಡಿಸಿದರು.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ

HAMPI TIMES MARGADARSHI

ಏಪ್ರಿಲ್ 04 ಹಿಂದಿ

ಈವರೆಗೆ ಓದಿದ್ದನ್ನು ಪುನರ್‌ಮನನ ಮಾಡಿ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಹಿಂದಿ

**10 ನೇ ತರಗತಿ** — ಹಿಂದಿ

**ಬಹು ನಿರೀಕ್ಷಿತ ಪ್ರಶ್ನೆಗಳು**

**दुनिया में पहला मकान ( लेख )**

1)लालिम और किंचा लालीदाम जंगल की ओर क्यो चल पडे ?

2) हाथी ने दोस्तो को क्या उत्तर दिया ?

3) मछली ने दोस्तो का प्रश्न का क्या जवाब दिया ?

**समय की पहचान ( कविता )**

4) समय का सदुपयुग कैसे करना चाहिए |

5) समय की पहचान कविता के अंतिम चार पंक्तियो में कवि क्या कहना चाहता है ?

**रोबोट ( कहानी )**

6) धिरज सक्सेना को बुद्धिमान रोबोट की जरूरत क्यो थी ?

7) रोबोनिल और रोबोदीप की मुलाकात का वर्णन कीजिए |

**महिला की साहसगाथा ( व्यक्ति परिचय )**

8) महिला की साहसगाथा पाठ से अपको क्या संदेश मिलती ?

9) एवरेस्ट की चोटी पर पहुँचकर बचेन्द्री ने क्या किया ?

10)दक्षिणी शिखर पर चढते समय बिछेन्द्री के अनुभव के बारे में लिखिए |

11)बिछेन्द्री ने पहाड पर चढने की तैयारी किस प्रकार की ?

**सूर -श्याम ( पद )**

12) बालकृष्ण अपनी माता यशोदा से क्या-क्या शिकायते करता है ?

13) कृष्ण अपनी माता यशोदा के प्रति क्यो नाराज है ?

14) यशोदा कृष्ण के क्रोध को कैसे शांत करती है ?

**कर्नाटक संपदा ( निबन्ध )**

15) कर्नाटक के प्रकृतिक सौंदर्य का वर्णन कीजिए |

16)कर्नाटक की शिल्पकला का परिचय दीजिए |

17) कन्नड भाषा तथा संस्कति को कर्नाटक के साहित्यकारो की क्या देन है ?

**बाल – शक्ति ( लघु नाटिका )**

18) गाँव की सफाई के लिए बालक क्या काम करते हैं ?

19) गाँव को आदर्श गाँव कैसे बनाया जा सकता है ?

20) कलेक्टर साहब ने बच्चों की बडाई (तारीफा) कैसे की ?

18) पाँच हजार रूपये मिलने पर मोहन ने क्या सोचता है ?

**सत्य की महिमा ( पूरक वाचन )**

21) शास्त्र में सत्य बोलने का तरीका कैसे समझाया गया है ?

20) महात्मा गांधी का सत्य की शक्ति के बारे में क्या कथन है ?

22)"संसार के महान व्यक्तियो ने सत्य का सहारा लिया है " - सोदाहरण समझाइए |

**नागरिक के कर्तव्य ( पूरक वाचन )**

23) मीना मैडम ने 15 दिवसीय कार्यशिबिर में किन-किन कार्यक्रमो का आयोजन किया था ?

24) अकुल ने मीना मैडम से क्या कहा ?

25) प्राकृतिक संसाधनो के संरक्षण के बारे में सलमा क्या कहती है ?

**निबन्ध**

**क) इंटरनेट :** * अर्थ, * लाभ, * हानि, * उपसंहार

**ग) समय अनमोल है । :** * प्रस्तावना , * महत्व * आवश्यकता, * उपसंहार

ನಿಮ್ಮ ಪ್ರಯತ್ನಕ್ಕೆ ತಕ್ಕ ಪ್ರತಿಫಲ ಸಿಗಲೆಂದು ಹಾರೈಸುತ್ತ , ಎಲ್ಲರಿಗೂ ಶುಭವಾಗಲಿ.

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಹೆಚ್.ತುಕಾರಾಮ್ ನಾಯ್ಕ, ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಮಗಿಮಾವಿನಹಳ್ಳಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಮೈಕ್ರೋ ನ್ಯೂಸ್

## ಅಬಕಾರಿ ಇಲಾಖೆ : ಆಕ್ಷೇಪಣೆಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ರಾಯಚೂರು

ಇಲ್ಲಿನ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 5 ವಾಹನ ಚಾಲಕರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ 15ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಲಿಂಗಸುಗೂರು ತಾಲೂಕಿನ ಗುಡದನಾಳ ಗ್ರಾಮದ ನಿವಾಸಿಯಾದ ಹನುಮೇಶ ತಂದೆ ಬಸಪ್ಪ ಬರಿನಾಳ, ದೇವದುರ್ಗದ ನಗರಗುಂಡ ನಿವಾಸಿಯಾದ ರಂಗನಾಥ ತಂದೆ ಚಿದಾನಂದ, ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ಮೇದಾಗಲ್ಲಿ ಗ್ರಾಮದ ನಿವಾಸಿಯಾದ ಅರುಣ್ ಕುಮಾರ್ ತಂದೆ ಆನಂದ, ರಾಯಚೂರಿನ ಅಸ್ಕಿಹಾಳ ನಿವಾಸಿಯಾದ ಖಾಜಾ ನಿಹಾರ ಬಾಷಾ ತಂದೆ ಮಹಮದ್ ಖಾಸಿಂ ಹಾಗೂ ದೇವದುರ್ಗ ತಾಲೂಕಿನ ಅರಕೇರಾ ನಿವಾಸಿಯಾದ ಮಹಮದ್ ಇದ್ರೀಸ್ ತಂದೆ ಮೆಹಬೂಬ್ ಸಾಬ್ ಈ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಬಾಧಿತ ಅಭ್ಯರ್ಥಿಗಳು ಅಧಿಸೂಚನೆ ಹೊರಡಿಸಿದ 15 (ಹದಿನೈದು) ದಿನಗಳ ಒಳಗಾಗಿ ಸೂಕ್ತ/ಪೂರಕ ದಾಖಲೆಗಳೊಂದಿಗೆ ಲಿಖಿತ ಮೂಲಕ ಆಕ್ಷೇಪಣೆಗಳನ್ನು ಅಬಕಾರಿ ಉಪ ಆಯುಕ್ತರು ಹಾಗೂ ನೇಮಕಾತಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳು, ಕಟ್ಟಡ ಸಂ.1–11–65/9 ಮತ್ತು 10, ಕೃಷಿ ವಿಶ್ವವಿದ್ಯಾಲಯದ ಎದುರು, ಶೋರೂಮ್ ಹಿಂಭಾಗ, ಲಿಂಗಸುಗೂರು ರಸ್ತೆ, ರಾಯಚೂರು ಈ ವಿಳಾಸಕ್ಕೆ ಸಲ್ಲಿಸತಕ್ಕದು. ನಿಗದಿತ ದಿನಾಂಕದೊಳಗೆ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಮಾತ್ರ ನಿಯಮಾನುಸಾರ ಪರಿಶೀಲಿಸಿ ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು. ನಿಗದಿತ ಅವಧಿ ಮೀರಿ ಸ್ವೀಕೃತವಾಗುವ ಆಕ್ಷೇಪಣೆಗಳು/ಪೂರಕ ದಾಖಲೆಗಳೊಂದಿಗೆ ಸಲ್ಲಿಸದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅಬಕಾರಿ ಇಲಾಖೆಯ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತಾಯಿ ಮಕ್ಕಳ ಮರಣ ಪ್ರಮಾಣ ತಗ್ಗಿಸಲು ಕಿಲ್ಕಾರಿ ಉಚಿತ ಮೊಬೈಲ್ ಆರೋಗ್ಯ ಸೇವೆ

■ ಹಂಪಿ ಟೈಮ್ಸ್ ರಾಯಚೂರು

ಜಿಲ್ಲೆಯಲ್ಲಿ ತಾಯಿ ಮತ್ತು ಮಕ್ಕಳ ಮರಣ ಪ್ರಮಾಣ ತಗ್ಗಿಸುವ ಉದ್ದೇಶದಿಂದ ಆರೋಗ್ಯ ಇಲಾಖೆಯು ತೆಗೆದುಕೊಳ್ಳಬೇಕಾದ ಲಸಿಕೆ, ಆರೋಗ್ಯ ಕ್ರಮಗಳ ಬಗ್ಗೆ ಕರೆ ಮಾಡಿ ಮಾಹಿತಿ ನೀಡುವ ಕಿಲ್ಕಾರಿ ಎಂಬ ಉಚಿತ ಮೊಬೈಲ್ ಆರೋಗ್ಯ ಸೇವೆಯನ್ನು ಜಾರಿಗೆ ತಂದಿದೆ. ಜಿಲ್ಲೆಯ ಅಂದಾಜು 42 ಸಾವಿರ ಗರ್ಭಿಣಿಯರು, ಮಕ್ಕಳಿಗೆ ಇದರಿಂದ ಅನುಕೂಲವಾಗಲಿದೆ.

ಪ್ರತಿವರ್ಷ ರಾಯಚೂರು ಜಿಲ್ಲೆಯಲ್ಲಿ ಅಂದಾಜು 42 ರಿಂದ 45 ಸಾವಿರ ಗರ್ಭಿಣಿಯರು ದಾಖಲಾಗುತ್ತಾರೆ. ಈ ಸಂದರ್ಭದಲ್ಲಿ ನಾನಾ ಕಾರಣಗಳಿಗೆ ತಾಯಿ ಮತ್ತು ನವಜಾತ ಶಿಶುಗಳ ಮರಣ ಸಂಭವಿಸುವ ಸಾಧ್ಯತೆ ಇರುತ್ತದೆ. ಅದನ್ನು ತಪ್ಪಿಸಲು ಸರಕಾರವು ಕಿಲ್ಕಾರಿ ಸೇವೆ ಜಾರಿಗೆ ತರಲಾಗಿದೆ. ತನ್ಮೂಲಕ ಗರ್ಭಧಾರಣೆ, ಗರ್ಭಿಣಿ ತಾಯಿ ಮತ್ತು ಮಗುವಿನ ಆರೋಗ್ಯದ ಮಾಹಿತಿಯನ್ನು ನೇರವಾಗಿ ಕುಟುಂಬಗಳ ಮೊಬೈಲ್ ಫೋನ್‌ಗೆ ತಲುಪಿಸಲಾಗುತ್ತದೆ.

ಕಿಲ್ಕಾರಿ ಕಾರ್ಯಕ್ರಮವು ಮೊಬೈಲ್ ಆಧಾರಿತ ಸೇವೆಯಾಗಿದ್ದು, ಇದು 2016ರ ಜನವರಿ 15ರಂದು ಡಿಜಿಟಲ್ ಇಂಡಿಯಾ ಉಪಕ್ರಮದ ಭಾಗವಾಗಿ ಹೊಸ ಮತ್ತು ಹಾಲಿ ಗರ್ಭಿಣಿಯರಿಗಾಗಿ ಪ್ರಾರಂಭಿಸಲ್ಪಟ್ಟಿದೆ. ಹೊಸ ಮತ್ತು ನಿರೀಕ್ಷಿತ ತಾಯಂದಿರಿಗೆ ಪ್ರಮುಖ ಆರೋಗ್ಯ ಮಾಹಿತಿಯನ್ನು ನೇರವಾಗಿ ತಲುಪಿಸಲು ಮೊಬೈಲ್ ತಂತ್ರಜ್ಞಾನ ಬಳಸಿಕೊಳ್ಳಲಾಗುತ್ತದೆ.

ಕಿಲ್ಕಾರಿ ಎಂದರೇನು? ಕಿಲ್ಕಾರಿಯು ಗರ್ಭಿಣಿ, ಬಾಣಂತಿಯರಿಗೆ ತಂದಿರುವ ಉಚಿತ ಆರೋಗ್ಯ ಮಾಹಿತಿ ನೀಡುವ ಮೊಬೈಲ್ ಸೇವೆಯಾಗಿದೆ. ಈ ಉಚಿತ ಸೇವೆಯು ಗರ್ಭಧಾರಣೆಯ 4ನೇ ತಿಂಗಳಿನಿಂದ ಮಗುವಿನ ಮೊದಲ ಜನ್ಮದಿನದವರೆಗಿನ ಅವಧಿಯಲ್ಲಿ ತಾಯಿಯ ಆರೋಗ್ಯದ ಬಗ್ಗೆ ಹಾಗೂ ಮಕ್ಕಳಿಗೆ ನೀಡುವ ಲಸಿಕೆಗಳ ಬಗ್ಗೆ ಮಾಹಿತಿಯನ್ನು ಮುಂಚಿತವಾಗಿ ಕರೆಗಳ ಮೂಲಕ ತಿಳಿಸಲಾಗುತ್ತದೆ.

ಕಿಲ್ಕಾರಿ ನೋಂದಣಿ ಹೇಗೆ? ಗರ್ಭಧಾರಣೆಯ ಅಥವಾ ಮಗುವಿನ ಜನನದ ವಿವರಗಳನ್ನು ಆಶಾ ಕಾರ್ಯಕರ್ತೆ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ, ಸಮುದಾಯ ಆರೋಗ್ಯ ಅಧಿಕಾರಿ ಅಥವಾ ಹತ್ತಿರದ



ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಮೋಬೈಲ್ ಸಂಖ್ಯೆ ನೀಡಿ ನೋಂದಾಯಿಸಿಕೊಳ್ಳಬೇಕು. ನಂತರ ಈ ಮಾಹಿತಿಯನ್ನು ಆರ್.ಸಿ.ಹೆಚ್ (ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ) ಪೋರ್ಟಲ್‌ನಲ್ಲಿ ನಮೂದಿಸಲಾಗುತ್ತದೆ.

ಗರ್ಭಿಣಿಯರು ಪಾಲಿಸಬೇಕಾದ ಅಂಶಗಳು: ಆರೋಗ್ಯ ಇಲಾಖೆಗೆ ತಾವು ಚಾಲ್ತಿಯಲ್ಲಿರುವ ಸೂಕ್ತ ಮೊಬೈಲ್ ಸಂಖ್ಯೆಯನ್ನು ನೀಡಬೇಕು ಅಲ್ಲದೆ ತಮ್ಮ ಮೊಬೈಲ್‌ನಲ್ಲಿ ಕಿಲ್ಕಾರಿ ದೂರವಾಣಿ ಸಂಖ್ಯೆ: 0124–4451660 ಅನ್ನು ಸೇವ್ ಮಾಡಬೇಕು. ಹಾಗೂ ಈ ಸಂಖ್ಯೆಯಿಂದ ಕರೆಗಳು ಬಂದಾಗ ಸ್ವೀಕಾರ ಮಾಡಬೇಕು. ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ಫಲಾನುಭವಿಗಳು ತಮ್ಮ ಮೊಬೈಲ್ ಸಂಖ್ಯೆ ನೀಡಿ ನೊಂದಾಯಿಸಿಕೊಳ್ಳಬೇಕು. ನಂತರ ಈ ಮಾಹಿತಿ ಆರ್.ಸಿ.ಹೆಚ್ ಪೋರ್ಟ್‌ಲಗೆ ನಮೂದಿಸಲಾಗುತ್ತದೆ. ನಂತರ ಉಚಿತವಾದ ಕಿಲ್ಕಾರಿ ಕರೆ ಸ್ವೀಕರಿಸಲು ಸಾಧ್ಯವಾ ಗುತ್ತದೆ. ಗರ್ಭಧಾರಣೆ ಅವಧಿಗೆ ಸಂಬಂಧಿಸಿದ ಆರೋಗ್ಯ ಮಾಹಿತಿ ಮತ್ತು ಮಗು ಜನಿಸಿದ ನಂತರ 9 ತಿಂಗಳವರೆಗೆ ಹಾಕಿಸಬೇಕಾದ 12 ಲಸಿಕೆ ಬಗ್ಗೆ ಮುಂಚಿತವಾಗಿ ಕರೆ ಮೂಲಕ ತಿಳಿಸಲಾಗುತ್ತದೆ. ಕಿಲ್ಕರಿ ಸಂಖ್ಯೆಯನ್ನು ಮೊಬೈಲ್‌ನಲ್ಲಿ ಇರಿಸಿಕೊಳ್ಳಬೇಕು. ಒಂದು ವೇಳೆ ಕರೆ ಬಾರದಿದ್ದರೆ ಅಥವಾ ಮಾಹಿತಿಯನ್ನು ಮತ್ತೊಮ್ಮೆ ಕೇಳಲು ಬಯಸಿದರೆ ತಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯಿಂದ 14423ಗೆ ಕರೆ ಮಾಡಬೇಕು. ಸಾಕಷ್ಟು ಫಲಾನುಭವಿಗಳು ತಮ್ಮ ಪ್ರಿ–ರಿಕಾರ್ಡೆಡ್ ಕರೆಗಳು ಬಂದಾಗ ಸ್ವೀಕರಿಸುವುದಿಲ್ಲ. ಅಥವಾ ಆರೋಗ್ಯ ಇಲಾಖೆಗೆ ಯಾರೋದೋ ಮೊಬೈಲ್ ನಂಬರ ನೀಡಿರುತ್ತಾರೆ. ಹಾಗಾಗಂದಂತೆ ಸಾರ್ವಜನಿಕರು ನೋಡಿ ಬೇಕು. ಈ ಯೋಜನೆಯ ಸದುಪಯೋಗ ತಪ್ಪದೇ ಪಡೆದುಕೊಂಡು ತಾಯಿ ಮತ್ತು ಶಿಶುವಿನ ಮರಣದ ಪ್ರಮಾಣ ಕಡಿಮೆ ಮಾಡಬೇಕು. ಯಾವ್ಯಾವ ಸಂದೇಶ ಬರುತ್ತದೆ? ಗರ್ಭಧಾರಣೆಯ ಅವಧಿಗೆ ಸಂಬಂಧಿಸಿದ ಆರೋಗ್ಯ ಮಾಹಿತಿ, ಮಗು ಜನಿಸಿದ ನಂತರ, ಶಿಶುವಿನ ವಯಸ್ಸಿಗೆ ಸಂಬಂಧಿಸಿದ ಆರೋಗ್ಯ ಮಾಹಿತಿ ಮತ್ತು ಸಲಹೆ ನೀಡಲಾಗುತ್ತದೆ. ಇದಲ್ಲದೇ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆಯೂ ಮಾಹಿತಿಗಳನ್ನು ತಿಳಿಸಿಕೊಡಲಾಗುತ್ತದೆ.



ತಾಯಿ ಮತ್ತು ಶಿಶು ಮರಣ ಸಂಭವಿಸುವ ಸಾಧ್ಯತೆಯನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರವು ಆರೋಗ್ಯ ಇಲಾಖೆ ವತಿಯಿಂದ ಕಿಲ್ಕಾರಿ ಎಂಬ ಉಚಿತ ಮೊಬೈಲ್ ಆರೋಗ್ಯ ಸೇವೆ ಜಾರಿಗೆ ತಂದಿದ್ದು, ಈ ಯೋಜನೆಯನ್ನು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು.

– ಸುರೇಂದ್ರ ಬಾಬು
ಡಿಹೆಚ್‌ಓ ರಾಯಚೂರು



ತಾಯಿ ಮತ್ತು ಶಿಶು ಮರಣದ ದರ ಕಡಿಮೆ ಮಾಡಲು ಹಾಗೂ ಗರ್ಭಿಣಿ ತಾಯಂದಿರಿಗೆ ಗುಣಮಟ್ಟದ ಆರೈಕೆ ಮಾಹಿತಿ ಒದಗಿಸಲು ಸರ್ಕಾರವು ಕಿಲ್ಕಾರಿ ಸೇವೆ ಆರಂಭಿಸಿದ್ದು, ಜಿಲ್ಲೆಯ ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕು.

– ಡಾ.ನಂದಿತಾ, ಜಿಲ್ಲಾ ಆರ್.ಸಿ.ಹೆಚ್
ಅಧಿಕಾರಿಗಳು ರಾಯಚೂರು.


14 ಭಾಷೆಗಳಲ್ಲಿ ಸುದ್ದಿ
ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗಾಗಿ ಭೇಟಿ ನೀಡಿ
www.hampitimes.com

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

02–04–2025 – ಬುಧವಾರ

| | |
|---|---|
| ತಿಥಿ | : ಪಂಚಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಕೃತ್ತಿಕಾ |
| ಯೋಗ | : ಆಯುಷ್ಮಾನ್ |
| ಕರಣ | : ಭವ |
| ಸೂರ್ಯೋದಯ | : 06:19:30 |
| ಸೂರ್ಯಾಸ್ತ | : 18:41:38 |
| ರಾಹು ಕಾಲ | : 12:31–14:03 |
| ಯಮಘಂಡ ಕಾಲ | : 07:52–09:25 |
| ಗುಳಿಕ ಕಾಲ | : 10:58–12:31 |



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 01–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1590.00 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 10761 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 11.029 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1580.50 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 926 ಕ್ಯುಸೆಕ್ |
| ಸಾಮರ್ಥ್ಯ | 4.719 ಟಿಎಂಸಿ |

For Ads
Contact: 94486 33038

ಶ್ರೀ ಗುರು ಬಸವಲಿಂಗಾಯ ನಮಃ
ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ ಹೊಸಪೇಟೆ



ಶರಣ ಸಂಸ್ಕೃತಿ–ಸಂಸ್ಕಾರ ಶಿಬಿರ–2025

ನಿಮ್ಮ ಮಕ್ಕಳಿಗೆ ಬಾಲ್ಯದಲ್ಲಿಯೇ ಬಸವಾದಿ ಶರಣರು ನಿರೂಪಿಸಿದ ಕಾಯಕ, ದಾಸೋಹ ಹಾಗೂ ಪ್ರಸಾದದ ಮಹತ್ವವನ್ನು ತಿಳಿಸಿಕೊಟ್ಟು ವಚನ ಸಾಹಿತ್ಯವನ್ನು ಪರಿಚಯಿಸಿ ವಿದ್ಯಾರ್ಥಿಗಳಲ್ಲಿ ಶಿಸ್ತು, ಸಮಯ ಪಾಲನೆ, ಗುರು–ಲಿಂಗ–ಜಂಗಮ ತತ್ವಗಳ ತಿಳುವಳಿಕೆ, ತಂದೆ–ತಾಯಿ–ಹಿರಿಯರಿಗೆ ಗೌರವ ಕೊಡುವುದು, ಹೃದಯ ವೈಶಾಲ್ಯತೆ, ದೇಶಪ್ರೇಮ, ಪರಿಸರ ಸಂರಕ್ಷಣೆ, ಸಾವಯವ ಕೃಷಿಯ ಮಹತ್ವ, ಆಹಾರ ಮತ್ತು ಆರೋಗ್ಯ, ವೈಜ್ಞಾನಿಕ ಮನೋಭಾವ, ನಮ್ಮ ನೆಲದ ಇತಿಹಾಸದ ಮಹತ್ವ, ದೇಶೀಯ ಕ್ರೀಡೆಗಳ ಪರಿಚಯ ಮುಂತಾದ ಮಾನವೀಯ ಮೌಲ್ಯಗಳ ಮೂಲಕ ವ್ಯಕ್ತಿತ್ವ ವಿಕಸನದ ಉದ್ದೇಶದಿಂದ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ ಹೊಸಪೇಟೆಯಲ್ಲಿ ಏಪ್ರಿಲ್ 13 ರಿಂದ 22ರವರೆಗೆ 10 ದಿನಗಳ ಶರಣ ಸಂಸ್ಕೃತಿ–ಸಂಸ್ಕಾರ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ನಾಡಿನ ಹೆಸರಾಂತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿಯನ್ನು ಕೊಡಿಸಲಾಗುತ್ತಿದೆ.

6ನೇ ತರಗತಿಯಿಂದ 12ನೇ (ಪಿ.ಯು.ಸಿ) ತರಗತಿಯವರೆಗೆ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ಈ ಶಿಬಿರಕ್ಕೆ ತೆಗದುಕೊಳ್ಳಲಾಗುವುದು. ಕಾರಣ ಯಾವುದೇ ಮತ, ಧರ್ಮ, ಜಾತಿಗಳ ಬೇಧವಿಲ್ಲದೇ ಆಸಕ್ತ ಪಾಲಕರು ತಮ್ಮ ಮಕ್ಕಳ ಹೆಸರುಗಳನ್ನು ದಿನಾಂಕ: 10–04–2025ರ ಒಳಗಾಗಿ ಶ್ರೀಮಠದ ಕಾರ್ಯಾಲಯದಲ್ಲಿ ನೋಂದಾಯಿಸಲು ಕೋರಲಾಗಿದೆ.

ಗ್ರಾಮಾಂತರ ಪ್ರದೇಶಗಳಿಂದ ಬರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ಉಚಿತ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಆದ್ದರಿಂದ ಹೊಸಪೇಟೆ ನಗರ ಹಾಗೂ ಸುತ್ತಮುತ್ತಣ ಗ್ರಾಮಗಳ ಶ್ರೀಮಠದ ಅಭಿಮಾನಿ ಸದ್ಭಕ್ತರು ಈ ಶಿಬಿರದ ಸದುಪಯೋಗವನ್ನು ಪಡೆಯಲು ಕೋರುತ್ತೇವೆ.

ವ್ಯವಸ್ಥಾಪಕರು
ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ
ಸಂಪರ್ಕ ಸಂಖ್ಯೆಗಳು : 9449922987, 9902805090, 7760617275, 9449019133

ವೇಳಾಪಟ್ಟಿ

| | | | |
|---|---|---|---|
| ಬೆಳಗ್ಗೆ | : | 05.00 | ಏಳುವುದು |
| | | 05.00–05.30 | ವೈಯಕ್ತಿಕ ಸ್ವಚ್ಛತೆ |
| | | 05.30– 07.00 | ಯೋಗಾಸನ, ವ್ಯಾಯಾಮ |
| | | 07.00–08.00 | ಸ್ನಾನ |
| | | 08.00–09.00 | ಇಷ್ಟಲಿಂಗ ಪೂಜೆ |
| | | 09.00– 10.00 | ಬೆಳಗಿನ ಪ್ರಸಾದ |
| | | 10.00–10.45 | ಉಪನ್ಯಾಸ –1 |
| | | 10.45– 11.30 | ಉಪನ್ಯಾಸದ ವಿಷಯ ಕುರಿತು ಚರ್ಚೆ |
| | | 11.30– 11.45 | ವಿರಾಮ |
| | | 11.45– 12.30 | ಪ್ರಾದೇಶಿಕ ಪರಿಚಯ |
| | | 12.30–01.15 | ವಚನ ಕಂಠಪಾಠ |
| ಮಧ್ಯಾಹ್ನ | : | 01.15–02.30 | ಮಧ್ಯಾಹ್ನ ಊಟ |
| | | 02.30–03.30 | ವಿಶ್ರಾಂತಿ |
| | | 03.30–04.15 | ಉಪನ್ಯಾಸ 2 |
| | | 04.15– 05.00 | ಉಪನ್ಯಾಸದ ವಿಷಯ ಕುರಿತು ಚರ್ಚೆ |
| ಸಂಜೆ | : | 05.00–07.00 | ದೇಶಿ ಆಟಗಳು |
| | | 07.00–08.00 | ಸಂಗೀತ ಮತ್ತು ನೃತ್ಯ |
| ರಾತ್ರಿ | : | 08.00– 09.00 | ರಾತ್ರಿ ಊಟ |
| | | 09.00–09.30 | ಶಿವಾನುಭವ |
| | | 09.30 | ಮಲಗುವುದು |

ಉಪನ್ಯಾಸದ ವಿಷಯಗಳು

- ಶರಣ ಸಂಸ್ಕೃತಿ
- ವಚನ ಸಾಹಿತ್ಯದ ಪರಿಚಯ
- ಅಖಂಡ ಬಳ್ಳಾರಿ ಜಿಲ್ಲೆಯ ಐತಿಹಾಸಿಕ ಪರಿಚಯ
- ದೇಶಭಕ್ತಿ
- ಸಾವಯವ ಕೃಷಿ
- ಆಹಾರ ಮತ್ತು ಆರೋಗ್ಯ
- ನಮ್ಮ ಪರಂಪರೆಯ ಮಹತ್ವ
- ತಂದೆ ತಾಯಿಗಳ ಪಾಲನೆ–ಪೋಷಣೆ
- ಸೇವಾಮನೋಭಾವ
- ಸ್ಪರ್ಧಾತ್ಮಕ ಮನೋಭಾವ
- ಸಾಮಾಜಿಕ ಜಾಲತಾಣಗಳ ಸದುಪಯೋಗ
- ಪರಿಸರ ಸಂರಕ್ಷಣೆ
- ಹಂಪೆಯ ಪರಿಚಯ
- ವಿಜಯನಗರ ಅರಸರು ಕೈಕೊಂಡ ಅಭಿವೃದ್ಧಿ ಕಾರ್ಯಗಳು
- ಬಸವಾದಿ ಶರಣರ ಸಾಮಾಜಿಕ ಕ್ರಾಂತಿ
- ಮೌಢ್ಯಾಚರಣೆಗಳ ಜಾಗೃತಿ
- ನಿತ್ಯ ಜೀವನದಲ್ಲಿ ವಚನಗಳ ಪಾಲನೆ
- ವಚನಗಳ ಪ್ರಸ್ತುತತೆ
- ಕನ್ನಡ ವ್ಯಾಕರಣ